# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ನವೆಂಬರ್ 10, 2024

ಸಂಪುಟ : 51 ಸಂಚಿಕೆ : 177 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




**ಗಾಜಿನ ಮನೆಯಲ್ಲಿ ಸುವರ್ಣ ಸಂಭ್ರಮ** ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಜಿಲ್ಲಾಡಳಿತ ವತಿಯಿಂದ ಗಾಜಿನ ಮನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಸುವರ್ಣ ಸಂಭ್ರಮ ಏರ್ಪಡಿಸಲಾಗಿದ್ದು, ಶನಿವಾರ ಸಂಜೆ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

### ಕೋವಿಡ್ - 19 ಚಿಕಿತ್ಸೆ, ನಿರ್ವಹಣೆ ಹೆಸರಿನಲ್ಲಿ ಹಗರಣ

## ಬಿಎಸ್‌ವೈ, ಶ್ರೀರಾಮುಲು ವಿರುದ್ಧ ತನಿಖೆಗೆ ಶಿಫಾರಸ್ಸು

ಬೆಂಗಳೂರು, ನ. 9- ಕೋವಿಡ್-19 ಸಂದರ್ಭದಲ್ಲಿ ಚಿಕಿತ್ಸೆ ಹಾಗೂ ನಿರ್ವಹಣೆ ಹೆಸರಿನಲ್ಲಿ ನಡೆದಿದೆ ಎನ್ನಲಾದ ಹಗರಣದಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಬಿ.ಶ್ರೀರಾಮುಲು ವಿರುದ್ಧ ತನಿಖೆಗೆ ನ್ಯಾಯಮೂರ್ತಿ ಜಾನ್‌ಮೈಕಲ್ ಡಿ.ಕುನ್ಹಾ ನೇತೃತ್ವದ ಆಯೋಗ ಶಿಫಾರಸ್ಸು ಮಾಡಿದೆ.

ಈ ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಕುನ್ಹಾ ನೇತೃತ್ವದ ಆಯೋಗವು ನೀಡಿರುವ ವರದಿಯನ್ನು ಕಾಂಗ್ರೆಸ್ ಬಹಿರಂಗಪಡಿಸಿದೆ.

ಆಯೋಗವು ಕಳೆದ ಆಗಸ್ಟ್ 31ರಂದು ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಸಿ, ಈ ಹಗರಣದಲ್ಲಿ ಆರೋಗ್ಯ, ನಗರಾಭಿವೃದ್ಧಿ, ಪೌರಾಡಳಿತ, ವೈದ್ಯಕೀಯ ಇಲಾಖಾ ಅಧಿಕಾರಿಗಳು ಭಾಗಿಯಾಗಿದ್ದಾರೆ.

ಇವರಿಂದ 700 ಕೋಟಿ ರೂ. ವಸೂಲಿ ಮಾಡಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಪ್ರತ್ಯೇಕ ಸಂಸ್ಥೆಯಿಂದ ತನಿಖೆ ನಡೆಸಿ, ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿತ್ತು.

ಇದು ಮಧ್ಯಂತರ ವರದಿ, ನಮಗೆ ಪೂರ್ಣ ವರದಿ ನೀಡಲು ಸಮಯಾವಕಾಶ ಬೇಕಿದೆ, ಎಲ್ಲಾ ಜಿಲ್ಲೆಗಳಿಂದ ಪೂರ್ಣ ಮಾಹಿತಿ ದೊರೆತಿಲ್ಲ.

ಆದರೆ, ಪ್ರಥಮ ಹಂತದಲ್ಲಿ ಸರ್ಕಾರದ ಬೊಕ್ಕಸಕ್ಕೆ



ನಷ್ಟ ಉಂಟು ಮಾಡಿರುವ ಹಣ ವಸೂಲಿ ಮಾಡಿ ಎಂದಿದೆ.

ಆಯೋಗದ ವರದಿಯನ್ನು ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಸ್ವೀಕೃತಿ ಮಾಡಿದ್ದಲ್ಲದೆ, ಶಿಫಾರಸ್ಸುಗಳ ಅನುಷ್ಠಾನ ಮತ್ತು ಕ್ರಮಕೈಗೊಳ್ಳುವ ಸಂಬಂಧ ಸಂಪುಟ ಉಪಸಮಿತಿ ರಚನೆಗೆ ತೀರ್ಮಾನ ಮಾಡಿತ್ತು.

ಕಿಟ್‌ಗಳ ಖರೀದಿ ವೇಳೆ 7223.64 ಕೋಟಿ ರೂ. ಮೊತ್ತದ ಅವ್ಯವಹಾರದ ಬಗ್ಗೆ ತನಿಖೆ ನಡೆಸಿ ಅದರಲ್ಲಿ 500 ಕೋಟಿ ರೂ.ಗಳನ್ನು ತಕ್ಷಣವೇ ವಸೂಲಿ ಮಾಡುವಂತೆ ಹೇಳಿತ್ತು.

ಇದೀಗ ಕಾಂಗ್ರೆಸ್ ಕುನ್ಹಾ ಅವರ ವರದಿಯ ಕೆಲವು ಭಾಗಗಳನ್ನು ದಾಖಲೆ ಸಹಿತ ಬಹಿರಂಗಪಡಿಸಿದೆ, ಈ ಎಲ್ಲಾ ಹಗರಣದ ಹಿಂದೆ (3ನೇ ಪುಟಕ್ಕೆ)

## ವಕ್ಫ್ : ಮ್ಯುಟೇಷನ್ ಪ್ರಕ್ರಿಯೆ ಕೂಡಲೇ ಸ್ಥಗಿತಗೊಳಿಸಲು ಆದೇಶ

**ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳಿಗೆ ಸಿಎಂ ನಿರ್ದೇಶನ**

ಬೆಂಗಳೂರು, ನ.9- ವಕ್ಫ್ ಹೆಸರಿನಲ್ಲಿ ಖಾತೆ ಮಾಡಲಾಗುತ್ತಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಮ್ಯುಟೇಷನ್ ಮಾಡಲು ಯಾವುದೇ ಕಛೇರಿ ಅಥವಾ ಯಾವುದೇ ಪ್ರಾಧಿಕಾರದಿಂದ ನೀಡಲಾದ ನಿರ್ದೇಶನಗಳನ್ನು ತಕ್ಷಣದಿಂದಲೇ ಹಿಂಪಡೆಯುವುದು ಹಾಗೂ ಮ್ಯುಟೇಷನ್ ಪ್ರಕ್ರಿಯೆ ಯನ್ನು ಕೂಡಲೇ ಸ್ಥಗಿತಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳಿಗೆ ಆದೇಶಿಸಿದ್ದಾರೆ. ಕೆಲವು ರೈತರ ಹಾಗೂ ಇತರೆ ಆಸ್ತಿಗಳನ್ನು ವಕ್ಫ್ ಹೆಸರಿಗೆ ಖಾತೆ ಮಾಡುತ್ತಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಭೆಯಲ್ಲಿ ಈ ಆದೇಶ ನೀಡಲಾಯಿತು.

ಈ ಕುರಿತು ನೀಡಲಾದ ಎಲ್ಲಾ ನೋಟಿಸ್‌ಗಳನ್ನು ಹಿಂಪಡೆಯಬೇಕು. ಅಲ್ಲದೇ, ಆ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರುಗಳ ವಿರುದ್ಧ ಯಾವುದೇ ಕ್ರಮ ಜರುಗಿಸತಕ್ಕದ್ದಲ್ಲ ಎಂದು ಮುಖ್ಯಮಂತ್ರಿಗಳು ಆದೇಶಿಸಿ, ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶಿಸಿದ್ದಾರೆ.

## ನ.14ರ ನಂತರ ವಕ್ಫ್ ವಿರುದ್ಧ ರಾಜ್ಯಾದ್ಯಂತ ಹೋರಾಟ

ದಾವಣಗೆರೆ, ನ.9- ವಕ್ಫ್ ಕಾಯ್ದೆ ರದ್ದುಗೊಳಿ ಸುವುದು ಮತ್ತು ಜಮೀರ್ ಅಹಮದ್ ಖಾನ್ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ, ರಾಜ್ಯಾದ್ಯಂತ ಹೋರಾಟ ಮಾಡಲಾಗುವುದು ಎಂದು ಶಾಸಕ ಬಿ.ಪಿ. ಹರೀಶ್ ತಿಳಿಸಿದರು.



ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕುರಿತು ನ.14ರಂದು ಬೆಂಗಳೂರಿನಲ್ಲಿ ಸಭೆ ಕರೆಯಲಾಗಿದೆ. ತದನಂತರ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಅವರ ನಾಯಕತ್ವದಲ್ಲಿ ಜಿಲ್ಲಾ ಪ್ರವಾಸ ಕೈಗೊಂಡು ಹಿಂದೂಗಳ ಒಂದಿಂಚೂ ಜಾಗವೂ ವಕ್ಫ್‌ಗೆ ಹೋಗದಂತೆ ಹೋರಾಟ ಮಾಡಲಾಗುವುದು ಎಂದು ಹೇಳಿದರು.

ವಕ್ಫ್ ಕಾಯ್ದೆಯಿಂದ ಹಿಂದೂಗಳಿಗೆ ಅನ್ಯಾಯವಾಗಿದೆ. ಈ ಕಾಯ್ದೆ ರದ್ದತಿಗೆ ಈಗಾಗಲೇ ಬಿಜಾಪುರದಲ್ಲಿ ಹಿರಿಯ ಶಾಸಕ ಯತ್ನಾಳ್ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೇರಿದಂತೆ ಅನೇಕ ಮುಖಂಡರು 4 ದಿನಗಳ ಅಹೋರಾತ್ರಿ ಧರಣಿ ಮಾಡಿದ್ದಾರೆ ಎಂದರು.

ದಾವಣಗೆರೆಯ ಪಿ.ಜೆ ಬಡಾವಣೆಯಲ್ಲೂ ವಕ್ಫ್ ಕಿತಾಪತಿ ಕಂಡು ಬಂದಿದೆ. ಇದು ರಾಜ್ಯ ಅಷ್ಟೇ ಅಲ್ಲ ದೇಶದ ಸಮಸ್ಯೆಯಾಗಿದ್ದು, ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಜಮೀರ್ ಅಹಮದ್ ಖಾನ್ ಅವರ ಅತಿರೇಕದ ವರ್ತನೆ ಇಂದು ಬೆಳಕಿಗೆ ಬಂದಿದೆ ಎಂದರು.

ಮಾಜಿ ಸಂಸದರ ನೇತೃತ್ವದಲ್ಲಿ (3ನೇ ಪುಟಕ್ಕೆ)

## ದೊಡ್ಡಬಾತಿ ಕೆರೆ ಅಭಿವೃದ್ಧಿಗೆ 12 ಕೋಟಿ ಮೀಸಲು : ಎಸ್ಸೆಸ್ಸೆಂ



ದಾವಣಗೆರೆ, ನ.9- ಪಕ್ಷಾತೀತವಾಗಿ ಒಗ್ಗಟ್ಟಿನಿಂದ ಸೇವೆಗಳನ್ನು ಮಾಡಿದರೆ ಅಭಿವೃದ್ಧಿ ಸಾಧ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಹೇಳಿದರು.

ದೊಡ್ಡಬಾತಿ ಗ್ರಾಮದ ಶ್ರೀ ಕೋಟೆ ಆಂಜನೇಯ ದೇವಸ್ಥಾನದ ಉದ್ಘಾಟನೆ, ಶಿಲಾಮೂರ್ತಿ ಪ್ರತಿಷ್ಠಾಪನೆ ಹಾಗೂ ನವಗ್ರಹ ಪ್ರತಿಷ್ಠಾಪನೆ ಮತ್ತು ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮ ಉದ್ಘಾಟನೆಗೊಳಿಸಿ ಅವರು ಮಾತನಾಡಿದರು.

ಪುರಾತನ ಕಾಲದ ಬಾತಿ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಪಕ್ಷಾತೀತವಾಗಿ ಒಗ್ಗಟ್ಟಿನಿಂದ ಜೀರ್ಣೋದ್ಧಾರ ಮಾಡಿರುವುದು ಉತ್ತಮ ಸಂಗತಿ. ಇಲ್ಲಿನ ಗ್ರಾಮಸ್ಥರ ಒಗ್ಗಟ್ಟಿನ ಕಾರ್ಯವು ಮೆಚ್ಚುವಂತದ್ದು, ಒಗ್ಗಟ್ಟಿನಿಂದ ಏನಾದರೂ ಸಾಧಿಸಬಹುದು ಎನ್ನುವುದಕ್ಕೆ ದೊಡ್ಡ ಬಾತಿ ಗ್ರಾಮಸ್ಥರು ಸಾಕ್ಷಿಯಾಗಿದ್ದಾರೆ. ಸರ್ಕಾರದಿಂದ ದೇವಸ್ಥಾನ ಅಭಿವೃದ್ಧಿಗೆ 8 ಲಕ್ಷ ರೂ. ನೀಡಲಾಗಿದೆ ಎಂದರು.

ಬಾತಿ ಗ್ರಾಮದಲ್ಲಿರುವ ಬಾತಿಕೆರೆಗೆ ಯುಜಿಡಿ ನೀರು ಹೋಗುತ್ತಿದೆ. ಇದನ್ನು ತಡೆಯಲು ಹೊಸ ಯೋಜನೆ ರೂಪಿಸಲಾಗಿದೆ. ಕೆರೆಯ ಅಭಿವೃದ್ಧಿ ಪಡಿಸಲು 12 ಕೋಟಿ ಮೀಸಲಿಡಲಾಗಿದ್ದು, ಯುಜಿಡಿ ಲೈನ್ ತಪ್ಪಿಸಲು ಗ್ರಾಮಸ್ಥರು ಮುಂದಾಗಬೇಕು ಎಂದು ಸಚಿವರು ತಿಳಿಸಿದರು.

ದೊಡ್ಡ ಬಾತಿ, ಹಳೇಬಾತಿ, ಬೇತೂರು ಕಲ್ಪನಹಳ್ಳಿ, ಕಕ್ಕರಗೊಳ್ಳ ಹಾಗೂ ದೊಡ್ಡ ಗ್ರಾಮಗಳಿಗೆ ಯುಜಿಡಿ ವ್ಯವಸ್ಥೆ ಮಾಡಲಾಗುವುದು. (3ನೇ ಪುಟಕ್ಕೆ)

## ಪಹಣಿಯಲ್ಲಿ ವಕ್ಫ್ ಹೆಸರು ಹಗಲು ದರೋಡೆ ಕೃತ್ಯ



ದಾವಣಗೆರೆ, ನ.9- ಪ್ರತಿಷ್ಠಿತ ಪಿ.ಜೆ. ಬಡಾವಣೆಯ ಒಂದು ಭಾಗ ವಕ್ಫ್ ಆಸ್ತಿ ಎಂದು ಗುರುತಿಸಲಾಗಿದೆ ಎನ್ನುವ ಮಾಹಿತಿ 'ಜನತಾವಾಣಿ' ಸೇರಿದಂತೆ ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿದೆ.

2015ರ ಕೋರ್ಟ್ ಆದೇಶದಂತೆ ಸರ್ವೆ ನಂಬರ್ 53 ರಲ್ಲಿ 4 ಎಕರೆ 13 ಗುಂಟೆ ಜಾಗವನ್ನು 'ಖಬರ ಸ್ಥಾನ ಸುನ್ನಿ ವಕ್ಫ್ ಸಂಸ್ಥೆ' ಎಂದು ಎಮ್. ಆರ್. ನಂಬರ್ ಅದಲು ಬದಲು ಮಾಡಿ 'ಮ್ಯುಟೇಷನ್ ರಿಜಿಸ್ಟರ್' ಆಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಈ ರೀತಿ 'ಹಗಲು ದರೋಡೆ' ರೀತಿಯ ಕೃತ್ಯ, ಅನೇಕ ತಲೆಮಾರುಗಳಿಂದ ಇಲ್ಲಿಯೇ ವಾಸವಾಗಿರುವ ನಾಗರಿಕರಿಗೆ, ಪ್ರತಿಷ್ಠಿತ ಎ.ವಿ.ಕೆ. ಕಾಲೇಜ್ ರಸ್ತೆಯ ವ್ಯಾಪಾರಿಗಳಿಗೆ ಆಘಾತಕಾರಿ ಎಂದು ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ ಆತಂಕ ವ್ಯಕ್ತಪಡಿಸಿದ್ದಾರೆ.

9 ವರ್ಷಗಳ ಹಿಂದೆಯೇ ಈ ರೀತಿಯ ಬದಲಾವಣೆ ಮಾಡಲಾಗಿದೆ ಎಂದಾಗ, ಮಹಾನಗರ ಪಾಲಿಕೆ ಗೆ ಪ್ರತಿ ವರ್ಷ ಕಂದಾಯ (2ನೇ ಪುಟಕ್ಕೆ)

## ಪಿ.ಜೆ. ಬಡಾವಣೆ ಪಹಣಿಯಲ್ಲಿನ ವಕ್ಫ್ ಹೆಸರು ರದ್ಧತಿಗೆ ಆಗ್ರಹ

ದಾವಣಗೆರೆ, ನ.9- ನಗರದ ಮಧ್ಯಭಾಗವಾದ ಪಿ.ಜೆ. ಬಡಾವಣೆಯ ಆಸ್ತಿ 53ನೇ ಸರ್ವೇ ನಂಬರಿನ ಪಹಣಿಯಲ್ಲಿ ವಕ್ಫ್ ಹೆಸರು ನೋಂದಣಿ ಆಗಿರುವುದನ್ನು ಜಿಲ್ಲಾಡಳಿತವು ಕೂಡಲೇ ರದ್ದು ಪಡಿಸಬೇಕು ಎಂದು ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನ ಕುಮಾರ್ ಆಗ್ರಹಿಸಿದರು.



ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 9 ವರ್ಷಗಳ ಹಿಂದೆಯೇ ಈ ಬಡಾವಣೆಯ 3ಎಕರೆ 15 ಗುಂಟೆ ಜಾಗವು ಖಬರಸ್ಥಾನ ಸುನ್ನಿ ವಕ್ಫ್ ಸಂಸ್ಥೆಯ ಹೆಸರಿನಲ್ಲಿ ಆರ್‌ಟಿಸಿ ಮ್ಯುಟೇಷನ್ ಆಗಿರುವುದು ಖಂಡನೀಯ ಎಂದು ಹೇಳಿದರು.

ಖಾಸಗಿ ಆಸ್ತಿಗಳನ್ನು ವಕ್ಫ್‌ಗೆ ನೀಡುವ ಹಿಂದಿನ ಷಡ್ಯಂತ್ರದ ಬಗ್ಗೆ ತನಿಖೆ ನಡೆದು ಬಹಿರಂಗ ಪಡಿಸಬೇಕು ಮತ್ತು ಆ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಶತಮಾನದಷ್ಟು ಹಳೇ ಬಡಾವಣೆ ಇದಾಗಿದ್ದು, ಈಗಾಗಲೇ 3-4 ತಲೆ ಮಾರುಗಳು ವಾಸವಿದ್ದಾರೆ ಮತ್ತು ಇಲ್ಲಿನ ನಿವೇಶನ ಹಾಗೂ ಕಟ್ಟಡಕ್ಕೆ ಸಂಬಂಧಿಸಿದಂತೆ ಕಂದಾಯ ಪಾವತಿಸಿದ ದಾಖಲೆಯೂ ಪಾಲಿಕೆಯಲ್ಲೇ ಸಿಗಲಿದೆ ಎಂದರು.

ಈ ಜಾಗವನ್ನು ವಕ್ಫ್ ಹೆಸರಿಗೆ ನೋಂದಣಿ ಮಾಡುವ ಮುನ್ನ ಅಧಿಕಾರಿಗಳಿಂದ ಯಾವುದೇ ಸ್ಥಳ ಪರಿಶೀಲನೆ ಆಗಿಲ್ಲ ಮತ್ತು ಅಲ್ಲಿ (2ನೇ ಪುಟಕ್ಕೆ)

# ದಾವಣಗೆರೆಯಲ್ಲಿ ಮಧ್ಯಮ ವರ್ಗಕ್ಕೆ ಕೈಗೆಟುಕದ ನಿವೇಶನಗಳು

### ಸ್ಮಾರ್ಟ್ ಸಿಟಿ ಹೆಸರಲ್ಲಿ ದರ ದುಪ್ಪಟ್ಟು, ಸೈಟುಗಳಿದ್ದರೂ ಕೊಳ್ಳಲಾಗದ ಜನತೆ, ನಿಂತ ನೀರಾಗಿದೆ ಭೂ ವ್ಯಾಪಾರ

**ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ**

ದಾವಣಗೆರೆ: ನಿವೇಶನ ಕೊಳ್ಳುವುದು, ಮನೆ ಕಟ್ಟಿಸುವುದು ಮಧ್ಯಮ ವರ್ಗದವರ ಕನಸು. ಆದರೆ ದಾವಣಗೆರೆಯಂತಹ ನಗರದಲ್ಲಿ ಮಧ್ಯಮ ವರ್ಗದವರು ನಿವೇಶನ ಕೊಳ್ಳುವುದು ಸಾಧ್ಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ದರಗಳು ಏರಿಕೆಯಾಗಿಬಿಟ್ಟಿವೆ.

ಮಾರ್ಗಸೂಚಿ ದರ ಏರಿಕೆ, ಮುದ್ರಾಂಕ ಶುಲ್ಕದ ಹೊರೆ, ಸಾಲು ಸಾಲು ಹಬ್ಬಗಳು ಮತ್ತಿತರೆ ಕಾರಣಗಳಿಂದಾಗಿ ಕಳೆದ ಮೂರ್ನಾಲ್ಕು ತಿಂಗಳಿನಿಂದ ಭೂ ವ್ಯವಹಾರಕ್ಕೆ ಗರ ಬಡಿದಂತಾಗಿದೆ ಎಂಬುದು ಮಧ್ಯವರ್ತಿಗಳ ಮಾತು. ಆದರೆ ಮಧ್ಯವರ್ತಿಗಳ 'ಕೃತಕ ದರ ಏರಿಕೆ' ಕಾರಣವೂ ಇದಕ್ಕೆ ಕಾರಣ ಇರಬಹುದು.

ನಗರದ ಸುತ್ತಲಿನ ಐದಾರೂ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ನಿವೇಶನಗಳಿದ್ದರೂ ಮಧ್ಯಮ ವರ್ಗಕ್ಕೆ ಕೈ ಗೆಟುಕುವಂತಿಲ್ಲ. ಹೀಗಾಗಿ ಕಳೆದ ಮೂರ್ನಾಲ್ಕು ತಿಂಗಳಿನಿಂದ ರಿಯಲ್ ಎಸ್ಟೇಟ್ ದಂಧೆ ನಿಂತ ನೀರಾಗಿದೆ. ಬಂಡವಾಳ ಶಾಹಿಗಳು ಮಾತ್ರ ಇಲ್ಲಿ ಹಣ ತೊಡಗಿಸುತ್ತಿದ್ದಾರೆಯೇ ವಿನಃ ಮಧ್ಯಮ ವರ್ಗ ಸದ್ಯಕ್ಕೆ ಕೊಳ್ಳುವಿಕೆಯಿಂದ ದೂರು ಉಳಿದಿದೆ.

2016ರಲ್ಲಿ ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆಯಾಗುತ್ತಲೇ ನಿವೇಶನಗಳ ಬೆಲೆ ಗಗನ ಮುಖಿಯಾಗಿಯಾಗ ತೊಡಗಿದವು. ಪ್ರತಿ ಅಡಿಗೆ 1500 ರೂ. ಇದ್ದ ನಿವೇಶನದ ಬೆಲೆ ದಿಢೀರನೆ 3 ಸಾವಿರ ರೂ.ಗಳಿಗೆ ಏರಿತ್ತು.

ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಸಾವಿರಾರು ಕೋಟಿ ರೂಪಾಯಿ ಅನುದಾನ ಬರುತ್ತದೆ. ದಾವಣಗೆರೆ ಸಿಂಗಾಪುರದಂತಾಗುತ್ತದೆ ಎಂದು ಭಾವಿಸಿದ ಬಂಡವಾಳ



ಶಾಹಿಗಳು ನಿವೇಶನಗಳನ್ನು, ಮನೆಗಳನ್ನು ಕೊಳ್ಳತೊಡಗಿದರು. ಇದು ಮಧ್ಯಮ ವರ್ಗಕ್ಕೆ ಬಿಸಿ ತುಪ್ಪವಾಯ್ತು.

ಇದಾದ ನಂತರವೂ ಅಂದರೆ ಕಳೆದ ಐದಾರು ವರ್ಷಗಳಿಂದ ಸ್ಮಾರ್ಟ್ ಹೆಸರಲ್ಲಿ ಬೆಲೆ ಏರುತ್ತಲೇ ಸಾಗಿತ್ತು. ಆದರೆ ಸ್ಮಾರ್ಟ್ ಯೋಜನೆ ಮುಗಿಯುತ್ತಾ ಬಂದರೂ, ದಾವಣಗೆರೆಯಲ್ಲಿ ಜನರ ಕಲ್ಪನೆಯಲ್ಲಿದ್ದ 'ಸ್ಮಾರ್ಟ್' ಸಿಟಿ ಮಾತ್ರ ಕನಸಾಗಿಯೇ ಉಳಿಯಿತು.

ಎರಡು ಬಸ್ ನಿಲ್ದಾಣಗಳು, ತುಂಗಭದ್ರಾ ನದಿ ಬಳಿ ಒಂದು ಬ್ಯಾರೇಜ್, ಒಂದಿಷ್ಟು ಸಿಮೆಂಟ್ ರಸ್ತೆಗಳನ್ನು ಬಿಟ್ಟರೆ, ಅಂತಹ ಘನಾಂಧಾರಿ ಕೆಲಸಗಳಾವುವೂ ಆಗಲೇ ಇಲ್ಲ. ಸ್ಮಾರ್ಟ್ ಸಿಟಿ ನೆಪದಿಂದ ಸ್ಮಾರ್ಟ್ ಆಗಿದ್ದು ಮಾತ್ರ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿದ್ದವರು.

ದಾವಣಗೆರೆ ನಾಲ್ಕೈದು ಕಿಲೋ ಮೀಟರ್ ಸುತ್ತ ನಿವೇಶನ ದರ ಪ್ರತಿ ಅಡಿಗೆ 4 ಸಾವಿರ ರೂ. ಆಸುಪಾಸಿದೆ. ಇಲ್ಲಿ ನಿವೇಶನ ಕೊಂಡು ಮನೆಕಟ್ಟುವುದು ಕಷ್ಟ. ಇನ್ನು ಹೃದಯ ಭಾಗದಲ್ಲಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಅಳಿದುಳಿದ ನಿವೇಶನಗಳಿಗೆ ಬಂಗಾರದ ಬೆಲೆ.

ಪಶ್ಚಿಮ ಭಾಗ ನಗರದಿಂದ ಹರಿಹರದವರೆಗೂ ಹೊಸ ಬಡಾವಣೆಗಳು ತಲೆ ಎತ್ತಿವೆ. ಇನ್ನೇನು ಕೆಲವೇ ವರ್ಷಗಳಲ್ಲಿ ದಾವಣಗೆರೆ-ಹರಿಹರ ಒಂದಾಗುವ ಹಂತದಲ್ಲಿದೆ. ನಗರದ ಸುತ್ತ ನಿವೇಶನ ಕೊಳ್ಳಲಾಗದ ಬಡ ವರ್ಗ ಈಗ ಬಾತಿ, ಕುಂದುವಾಡದ ಬಳಿ ಇರುವ ನಿವೇಶನಗಳತ್ತ ಕಣ್ಣು ಹಾಯಿಸಿದ್ದಾರೆ. ಆದರೆ ಕಳೆದ ಎರಡು (3ನೇ ಪುಟಕ್ಕೆ)

### ಹೊಸ ನಿವೇಶನದಲ್ಲಿ ಹತ್ತಿಪ್ಪತ್ತು ಸೈಟು...

**ಹೊಸ ನಿವೇಶನ ರೆಡಿಯಾಗುತ್ತಲೇ ಬಂಡವಾಳ ಶಾಹಿಗಳು ಅಥವಾ ಹಣವುಳ್ಳ ಮಧ್ಯವರ್ತಿಗಳು ಹತ್ತಿಪ್ಪತ್ತು ನಿವೇಶನಗಳನ್ನು ಕೊಂಡುಕೊಳ್ಳುತ್ತಾರೆ. ನಂತರ ಅವುಗಳನ್ನು ಲಾಭಕ್ಕೆ ಮಾರಿಕೊಳ್ಳುತ್ತಾರೆ. ಇದು ನಿವೇಶನಗಳ ದರ ಏರಿಕೆಗೆ ಪ್ರಮುಖ ಕಾರಣ.**

**ಇನ್ನು ನಿವೇಶನ ಕೊಂಡು ಮನೆಗಳನ್ನು ಕಟ್ಟಿಯೂ ಮಾರಾಟ ಮಾಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಪ್ರಕ್ರಿಯೆ ಹೆಚ್ಚಾಗಿದೆ. ನಿವೇಶನ ಖರೀದಿಸಿ, ಮನೆ ಕಟ್ಟಿಸಲೂ ಬಿಡುವಿಲ್ಲ ಎನ್ನುವವರೇ ಇವರಿಗೆ ಬಂಡವಾಳ.**

**ಉದಾಹರಣೆಗೆ 30 ಲಕ್ಷ ರೂ.ಗಳಿಗೆ ನಿವೇಶನ ಖರೀದಿಸಿ, 30 ಲಕ್ಷ ಖರ್ಚು ಮಾಡಿ ಮನೆ ಕಟ್ಟಿದರೆ, 90 ಲಕ್ಷ ರೂ.ಗಳಿಂದ 1 ಕೋಟಿ ರೂ. ವರೆಗೆ ಮನೆ ಮಾರಾಟ ಮಾಡಬಹುದು ಎಂಬುದು ಮನೆ ಕಟ್ಟಿ ಮಾರುವ ಮಧ್ಯವರ್ತಿಗಳ ಆಲೋಚನೆ.**

## ಡಾ. ಸುರೇಶ್ ಹನಗವಾಡಿ ಅವರಿಗೆ ವಿಕಲಚೇತನರ ರಾಷ್ಟ್ರೀಯ ಪ್ರಶಸ್ತಿ



ದಾವಣಗೆರೆ, ನ. 9 - ಮೂಲತಃ ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮದವರಾದ ನಗರದ ಜಜಮು ವೈದ್ಯಕೀಯ ಮಹಾವಿದ್ಯಾಲಯದ ಪೆಥಾಲಜಿ ವಿಭಾಗದ ಪ್ರಾಧ್ಯಾಪಕ ಡಾ. ಸುರೇಶ್ ಹನಗವಾಡಿ ಅವರು ಕೇಂದ್ರ ಸರ್ಕಾರದ-2024ನೇ ಸಾಲಿನ ವಿಕಲಚೇತನರ ಸಬಲೀಕರಣದ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಹಿಮೋಫಿಲಿಯಾ ನ್ಯೂನತೆ ಹೊಂದಿರುವ ಸುರೇಶ್ ಅವರು ಸತತ 44 ವರ್ಷಗಳಿಂದ ಈ ಕಾಯಿಲೆ ಬಗ್ಗೆ ಸಾಕಷ್ಟು ಅಧ್ಯಯನ (2ನೇ ಪುಟಕ್ಕೆ)




ಎಂಬಿಬಿಎಸ್., ಎಂ.ಡಿ.ಡಿ.ಎಂ., ಎಫ್.ಆರ್.ಸಿ.ಆರ್., ಎಂಡೋವಾಸ್ಕುಲರ್ ಸರ್ಜನ್, ಇಂಟರ್‌ವೆನ್ಷನಲ್ ರೇಡಿಯಾಲಜಿಸ್ಟ್, 15 ವರ್ಷಗಳ ಅನುಭವ
ಉಚಿತ
ದಾವಣಗೆರೆಯಲ್ಲಿ ವೆರಿಕೋಸ್ ವೆಯಿನ್ಸ್ ಸಮಾಲೋಚನೆ
ಆಲೂರು ಚಂದ್ರಶೇಖರಪ್ಪ ಮೇಮೋರಿಯಲ್ ಆಸ್ಪತ್ರೆ
295, 2ನೇ ಮುಖ್ಯ ಕಾಲೇಜು ರಸ್ತೆ, ಪಿಜೆ ಎಕ್ಸ್‌ಟೆನ್ಷನ್
ಎವಿಕೆ ಕಾಲೇಜ್ ರಸ್ತೆ, ದಾವಣಗೆರೆ.
ದಿ. : 10.11.2024 ಭಾನುವಾರ, ಸಮಯ : ಬೆ.10.00 ರಿಂದ 4.00 ರವರೆಗೆ
ಉಚಿತ ಕಲರ್ ಡಾಪ್ಲರ್ ಸ್ಕ್ರೀನಿಂಗ್ ವೈದ್ಯರಿಂದ ಅಗತ್ಯವೆಂದು ಕಂಡುಬಂದಲ್ಲಿ ಸ್ಕ್ಯಾನ್ ಮಾಡಲಾಗುತ್ತದೆ.
ಮುಂಗಡ ಕಾಯ್ದಿರಿಸುವಿಕೆಗಾಗಿ
96322 12204
"ಲೇಸರ್ ಚಿಕಿತ್ಸೆಯು (ಉಬ್ಬಿರುವ ರಕ್ತನಾಳಗಳನ್ನು) ಶಾಶ್ವತವಾಗಿ ಗುಣಪಡಿಸುತ್ತದೆ"

# ನಾಟಕ ಕಲೆಗೆ ಪ್ರೇಕ್ಷಕರ ಪ್ರೋತ್ಸಾಹ ಅಗತ್ಯ

**ಹರಪನಹಳ್ಳಿ : ಎಂ.ಪಿ ರವೀಂದ್ರ ಸ್ಮರಣಾರ್ಥ ನೀನಾಸಂ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ಎಂ.ಪಿ.ವೀಣಾ**



ಹರಪನಹಳ್ಳಿ,ನ.9- ನಶಿಸುತ್ತಿರುವ ನಾಟಕ ಕಲೆಯನ್ನು ಬೆಳೆಸಿ ಪೋಷಿಸುತ್ತಿರುವ ನೀನಾಸಂ ತಂಡಕ್ಕೆ ಪ್ರೇಕ್ಷಕರ ಪ್ರೋತ್ಸಾಹ ಅಗತ್ಯವಾಗಿದೆ ಎಂದು ಎಂ.ಪಿ.ಪ್ರಕಾಶ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷರಾದ ಎಂ.ಪಿ.ವೀಣಾ ಮಹಾಂತೇಶ್ ಹೇಳಿದರು.

ಪಟ್ಟಣದ ನಟರಾಜ ಕಲಾ ಭವನದಲ್ಲಿ ಮಾಜಿ ಶಾಸಕ ದಿವಂಗತ ಎಂ.ಪಿ.ರವೀಂದ್ರ ಅವರ 6ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಎಂ.ಪಿ.ಪ್ರಕಾಶ ಸಮಾಜಮುಖಿ ಟ್ರಸ್ಟ್ ಮತ್ತು ರಂಗಭಾರತಿ ಸಂಯುಕ್ತಾಶ್ರಯದಲ್ಲಿ ನೀನಾಸಂ ತಂಡ ಅಭಿನಯಿಸಿದ 'ಮಾಲತಿ ಮಾಧವ' ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಂದೆ ಎಂ.ಪಿ.ಪ್ರಕಾಶ್ ಹಾಗೂ ತಮ್ಮ ಎಂ.ಪಿ. ರವೀಂದ್ರ ಅವರು ರಂಗ ಕಲೆಯನ್ನು ಪ್ರೀತಿಸುತ್ತಿದ್ದರು. ಅವರ ಅಚ್ಚುಮೆಚ್ಚಿನ ಸಂಗ್ಯಾ ಬಾಳ್ಯ, ಜೋಕುಮಾರ ಸ್ವಾಮಿ ನಾಟಕಗಳನ್ನು ಯಾವಾಗಲೂ ಮೆಲುಕು ಹಾಕುತ್ತಿದ್ದರು. ಅವರಿಬ್ಬರೂ ರಾಜಕಾರಣಕ್ಕಲ್ಲದೇ ಸಾಂಸ್ಕೃತಿಕ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಡಾ. ಟಿ.ಎಂ.ಚಂದ್ರಶೇಖರಯ್ಯ ಮಾತನಾಡಿ. ನಡೆದಾಡುವ ಗ್ರಂಥಾಲಯ ಎಂದೇ ಗುರುತಿಸಿಕೊಂಡಿದ್ದ ಎಂ.ಪಿ.ಪ್ರಕಾಶ್‌ರವರು ರಾಜಕೀಯ ಕ್ಷೇತ್ರದಲ್ಲೂ ಪರಿಣಿತರಾಗಿದ್ದು, ಮೃದು ಸ್ವಭಾವದ ಮುತ್ಸದ್ದಿ ರಾಜಕಾರಣಿಗಳಾಗಿದ್ದರು. ನಟರಾಜ ಕಲಾಭವನ ನಿರ್ಮಾಣ ಮಾಡಲು ಅವರದ್ದೇ ಪ್ರೇರಣೆ ಎಂದು ಇಲ್ಲಿ ಸ್ಮರಿಸಲೇಬೇಕಿದೆ. ಅವರ ಹಾದಿಯಲ್ಲೇ ಎಂ.ಪಿ.ರವೀಂದ್ರ ಶಾಸಕರಾಗಿ ಉತ್ತಮ ಕಾರ್ಯಗಳನ್ನು ಮಾಡಿ,ಕಲೆ, ಸಾಹಿತ್ಯವನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ತನ್ನದೇ ಶೈಲಿಯನ್ನು ಹಿಡಿದಿದ್ದರು. ಅವರ ಕಾಳಜಿಯನ್ನು ಎಂದೂ ಮರೆಯುವಂತಿಲ್ಲ ಎಂದರು.

ನೀನಾಸಂ ತಂಡ ಅಭಿನಯಿಸಿದ 'ಮಾಲತಿ ಮಾಧವ' ನಾಟಕ ಪ್ರದರ್ಶನ ಜನರ ಮೆಚ್ಚುಗೆ ಪಡೆಯಿತು.

ಕಾರ್ಯಕ್ರಮದಲ್ಲಿ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪರಶುರಾಮ್, ಸಾಹಿತಿ ಇಸ್ಮಾಯಿಲ್ ಯಲಿಗಾರ್, ಉಪನ್ಯಾಸಕ ಮಲ್ಲಿಕಾರ್ಜುನ ಹೆಚ್, ಶಿಕ್ಷಕ ಅರ್ಜುನ್ ಪರಸಪ್ಪ, ಹಡಗಲಿ ಶಾಂತಮೂರ್ತಿ, ಕೊಟ್ರಸ್ವಾಮಿ, ದಾದಾಪೀರ್, ವಕೀಲ ಲಿಂಗನಗೌಡ ಸೇರಿದಂತೆ ಅನೇಕರು ಇದ್ದರು.

# ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆ ಕಾನೂನು ಅರಿವು ಜಾಗೃತಿ ಜಾಥಾ ಕಾರ್ಯಕ್ರಮ



ದಾವಣಗೆರೆ, ನ. 9 - ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆಯ ಅಂಗವಾಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಶಾಲಾ ಶಿಕ್ಷಣ ಇಲಾಖೆ ಹಾಗೂ ಸರ್ಕಾರಿ ಪ್ರೌಢಶಾಲೆ ನಿಟ್ಟುವಳ್ಳಿ ಹಾಗೂ ಐಎನ್‌ಎ-ಕೆಆರ್ ಜೆ ಭಾರತ ಸೇವಾದಳ ಶಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಕಾನೂನು ಅರಿವು ಜಾಗೃತಿ ಜಾಥಾವನ್ನು ಇಂದು ನಡೆಸಲಾಯಿತು.

ಜಾಥಾದಲ್ಲಿ ನ್ಯಾಯಾಧೀಶರಾದ ಪ್ರಶಾಂತ್ ಹಾಗೂ ಗಾಯತ್ರಿ ನಿಟ್ಟುವಳ್ಳಿಯ ದುರ್ಗಾಂಬಿಕಾ ದೇವಸ್ಥಾನದ ಹತ್ತಿರ ನೆರೆದಿದ್ದ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಕಾನೂನಿನ ಅಗತ್ಯ ತಿಳುವಳಿಕೆ ಮತ್ತು ಅದರ ಸದ್ಬಳಕೆಯ ಬಗ್ಗೆ ವಿವರಿಸಿದರು.

ಜಾಥಾದಲ್ಲಿ ಮಕ್ಕಳು ರಾಷ್ಟ್ರಧ್ವಜ, ಕನ್ನಡ ಧ್ವಜ ಕಾನೂನು ಅರಿವಿನ ಘೋಷಣಾ ಫಲಕಗಳು ಮತ್ತು ಸಂವಿಧಾನ ಪೀಠಿಕೆ ಹಿಡಿದು ಬ್ಯಾಂಡ್ ವಾದ್ಯದೊಂದಿಗೆ ಗ್ರಾಮದ ಬೀದಿಗಳಲ್ಲಿ ಪಥ ಸಂಚಲನಾ ಮಾಡುತ್ತಾ, ಕಾನೂನು ಅರಿವಿನ ಭಿತ್ತಿ ಪತ್ರಗಳನ್ನು ಸಾರ್ವಜನಿಕರಿಗೆ ಹಂಚುತ್ತಾ ಅರಿವು ಮೂಡಿಸುತ್ತಾ ನಡೆದರು. ಶೌಕತ್ ಅಲಿ ವಿವಿಧ ಸಹಾಯ ವಾಣಿಗಳ ಬಗ್ಗೆ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಿದರು.

ಮುಖ್ಯ ಶಿಕ್ಷಕ ಎಂ. ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಪಥ ಚಲನೆ ನಿರ್ವಹಣೆಯನ್ನು ದೈಹಿಕ ಶಿಕ್ಷಕ ದೇವರಾಜ್ ಮತ್ತು ಸೇವಾದಳ ರಾಜ್ಯ ಸಂಪನ್ಮೂಲ ಶಿಕ್ಷಕ ಕೆ.ಟಿ.ಜಯಪ್ಪ ಹಾಗೂ ಸೇವಾದಳ ಜಿಲ್ಲಾ ಸಂಘಟಕ ಫಕ್ಕೀರ್ ಗೌಡ ಹಳೇಮನಿ ಅವರುಗಳು ಯಶಸ್ವಿಯಾಗಿ ನಿರ್ವಹಿಸಿದರು.



## ಶ್ರೀ ರಾಮಕೃಷ್ಣ ಶಾಲೆಯಲ್ಲಿ ಫ್ರೂಟ್ಸ್ - ವೆಜಿಟೇಬಲ್ಸ್ ಡೇ

ದಾವಣಗೆರೆ, ನ. 9 - ಶ್ರೀ ರಾಮಕೃಷ್ಣ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಪ್ಲೇ ಗ್ರೂಪ್, ಎಲ್‌ಕೆಜಿ ಹಾಗೂ ಯುಕೆಜಿ ಮಕ್ಕಳಿಗೆ ಬ್ಯಾಗ್ ಲೆಸ್ ಡೇ ಪ್ರಯುಕ್ತ ಎಲ್ಲಾ ಮಕ್ಕಳಿಗೆ ಫ್ರೂಟ್ಸ್ ಮತ್ತು ವೆಜಿಟೇಬಲ್ಸ್ ಡೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮಕ್ಕಳು ವಿವಿಧ ರೀತಿಯ ಹಣ್ಣುಗಳಾದ ಸೇಬು, ಅನಾನಸ್, ದ್ರಾಕ್ಷಿ, ದಾಳಿಂಬೆ, ಮಾವಿನ ಹಣ್ಣು, ಬಾಳೆಹಣ್ಣು ಹಾಗೆ ತರಕಾರಿಗಳಾದ ಟೊಮ್ಯಾಟೋ, ಹೂ ಕೋಸು, ಬೆಂಡೆಕಾಯಿ, ಸೌತೆಕಾಯಿ, ಬದನೆಕಾಯಿ, ಕ್ಯಾರೆಟ್, ಆಲೂಗಡ್ಡೆ, ಮೂಲಂಗಿ, ಮೆಣಸಿನಕಾಯಿ ಇನ್ನು ಇತರೆ ವಿವಿಧ ರೀತಿಯ ಹಣ್ಣು - ತರಕಾರಿಗಳ ವೇಷಗಳನ್ನು ಹಾಕಿಕೊಂಡು ಹಣ್ಣು ತರಕಾರಿಗಳ ಬಗ್ಗೆ ಕಿರು ಪರಿಚಯವನ್ನು ನೀಡಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪೋಷಕರ ಹಾಗೂ ಸಾರ್ವಜನಿಕರಿಂದ ಮೆಚ್ಚುಗೆ ಪಡೆದುಕೊಂಡರು.

ಶಾಲೆಯ ಕಾರ್ಯದರ್ಶಿ ವಿಜಯಕುಮಾರ್, ನಿರ್ದೇಶಕರಾದ ಶ್ರೀಮತಿ ಸಹನಾ ವಿಜಯಕುಮಾರ್, ಮುಖ್ಯೋಪಾಧ್ಯಾಯ ಡಿ.ಸಿ ಸುರೇಶ್, ಸಹ ಶಿಕ್ಷಕಿ ಶೋಭಾ ಹುಲುಮನಿ, ಕಾವ್ಯ, ಆಶಾ, ಮಹಾಲಕ್ಷ್ಮಿ, ಅನಿತಾ, ಕರಿಬಸಮ್ಮ, ಶ್ರೀದೇವಿ, ತನುಶ್ರೀ, ಹಾಗೂ ಸಿಬ್ಬಂದಿಗಳಾದ ಅನುಸೂಯಮ್ಮ, ರಾಜೇಶ್ವರಿ, ಲಕ್ಷ್ಮಮ್ಮ, ಕಿರಣ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಗ್ರಾಮಾಂತರದಲ್ಲಿ ಇಂದು - ನಾಳೆ ವಿದ್ಯುತ್ ವ್ಯತ್ಯಯ

ಅತ್ತಿಗೆರೆ ವಿದ್ಯುತ್ ವಿತರಣಾ ಕೇಂದ್ರಗಳಿಂದ ಸರಬರಾಜಾಗುವ ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೊಗಲೇರಿ, ಗೋಪನಾಳು, ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಮತ್ತು ನಾಳೆ ಬೆಳಿಗ್ಗೆ 7 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಗ್ರಾಮಾಂತರದಲ್ಲಿಂದು ವಿದ್ಯುತ್ ವ್ಯತ್ಯಯ

ಎಲೆಬೇತೂರು ಶಾಖಾ ವ್ಯಾಪ್ತಿಯ ಯರಗುಂಟೆ ವಿ.ವಿ ಕೇಂದ್ರದಿಂದ ಹೊರಡುವ ಚಿತ್ತಾನಹಳ್ಳಿ, ದೇವರಹಟ್ಟಿ, ಅಮೃತನಗರ ಮಾರ್ಗದಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ದೊಡ್ಡಬೂದಿಹಾಳು, ಚಿಕ್ಕಬೂದಿಹಾಳು, ದೇವರಹಟ್ಟಿ, ಬಿ.ಕಲ್ಪನಹಳ್ಳಿ, ಚಿತ್ತಾನಹಳ್ಳಿ, ಅಮೃತನಗರ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಆನಂದ ಸಂಕೇಶ್ವರಗೆ 'ಲಾಜಿಸ್ಟಿಕ್ ಐಕಾನ್' ಪ್ರಶಸ್ತಿ



ಬೆಂಗಳೂರು, ನ.9- ಜೆಕೆ ಟೈರ್ ಕಂಪನಿ 20 ವರ್ಷಗಳ ಸಂಭ್ರಮಾಚರಣೆ ನಿಮಿತ್ತ ಸಿಂಗಾಪುರದಲ್ಲಿ ಕಳೆದ ವಾರ ಆಯೋಜಿಸಿದ್ದ ಉನ್ನತ ಮಟ್ಟದ ಸಮ್ಮೇಳನದಲ್ಲಿ ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ಆನಂದ ಸಂಕೇಶ್ವರ ಅವರಿಗೆ ವರ್ಷದ ಲಾಜಿಸ್ಟಿಕ್ ಐಕಾನ್ ಪ್ರಶಸ್ತಿ ನೀಡಿ ಗೌರವಿಸಿದೆ.

ಆಧುನಿಕ ಲಾಜಿಸ್ಟಿಕ್ಸ್ ನಿರ್ವಹಣೆಯಲ್ಲಿ ಪರಿವರ್ತನೆಯ ಪಾತ್ರ ನಿರ್ವಹಿಸಿದ ಸರಕು ಸಾಗಣೆ ಉದ್ಯಮದ ಅಗ್ರ ವ್ಯಕ್ತಿಯೆಂದು ಗುರುತಿಸಿ ಡಾ. ಆನಂದ ಸಂಕೇಶ್ವರ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಪ್ರಶಸ್ತಿ ಸ್ವೀಕರಿಸಿದ ಆನಂದ ಸಂಕೇಶ್ವರ ಮಾತನಾಡಿ, ಲಾಜಿಸ್ಟಿಕ್ಸ್‌ನ ಯಶಸ್ಸಿಗೆ ತಮ್ಮ ತಂಡ ಹಾಗೂ ತಂದೆ ವಿಜಯ ಸಂಕೇಶ್ವರರ ಮಾರ್ಗದರ್ಶನ ಕಾರಣ ಎಂದು ಹೇಳಿದರು. ಜೆಕೆ ಟೈರ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ರಘುಪತಿ ಸಿಂಘಾನಿಯಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

## ಡಾ. ಸುರೇಶ್ ವಿಕಲಚೇತನರ ರಾಷ್ಟ್ರೀಯ ಪ್ರಶಸ್ತಿ

**(1ನೇ ಪುಟದಿಂದ)** ನಡೆಸಿ, ಸರ್ಕಾರ ಮತ್ತು ಸಾರ್ವಜನಿಕರಿಗೆ ನ್ಯೂನತೆ ಬಗ್ಗೆ ಜಾಗೃತಿ ಮೂಡಿಸಿ ಅತಿ ದುಬಾರಿ ವೆಚ್ಚದ ಹಿಮೋಫಿಲಿಯಾ ಚಿಕಿತ್ಸೆಯನ್ನು ಸರ್ಕಾರದಿಂದ ಉಚಿತವಾಗಿ ದೇಶಾದ್ಯಂತ ದೊರಕಲು ಕಾರಣ ಕರ್ತರಾಗಿದ್ದಾರೆ. ದೇಶದಲ್ಲಿಯೇ ಹಿಮೋಫಿಲಿಯಾ, ತಲಸ್ಸೇಮಿಯಾ ಸೇರಿದಂತೆ ವಿರಳ ರಕ್ತಸ್ರಾವ ರೋಗಗಳಿಗೆ ಸಂಬಂಧಿಸಿದಂತೆ ಅತ್ಯುತ್ತಮ ಚಿಕಿತ್ಸಾ ಕೇಂದ್ರವನ್ನು ದಾವಣಗೆರೆ ನಗರದಲ್ಲಿ ಸ್ಥಾಪಿಸಿ ಅನ್ಯ ರಾಜ್ಯದ ರೋಗಿಗಳು ಒಳಗೊಂಡಂತೆ ಸಾವಿರಾರು ರೋಗಿಗಳಿಗೆ ಉತ್ಕೃಷ್ಟ ಗುಣಮಟ್ಟದ ಉಚಿತ ಚಿಕಿತ್ಸೆ ನೀಡುತ್ತಿದ್ದಾರೆ. ಡಾ. ಸುರೇಶ್ ಹನಗವಾಡಿ

## ನಗರದಲ್ಲಿ ಇಂದು - ನಾಳೆ ನೀನಾಸಂ ತಿರುಗಾಟ ನಾಟಕಗಳ ಪ್ರದರ್ಶನ

ಒಡನಾಟ ರಂಗ ತಂಡ, ಸಿದ್ದಗಂಗಾ ವಿದ್ಯಾಸಂಸ್ಥೆ, ಇನ್ಸೈಟ್ ಐಎಎಸ್, ಕೆಎಎಸ್ ಕೋಚಿಂಗ್ ಇನ್ ಸ್ಟಿಟ್ಯೂಟ್ ಸಹಯೋಗದೊಂದಿಗೆ ಸಿದ್ದಗಂಗಾ ವಿದ್ಯಾ ಸಂಸ್ಥೆ ಆವರಣದಲ್ಲಿ ಇಂದು ಮತ್ತು ನಾಳೆ ನೀನಾಸಂ ತಿರುಗಾಟ 2024 ನಾಟಕಗಳ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ.

ಇಂದು ಸಂಜೆ 7 ಗಂಟೆಗೆ ಮರಾಠಿ ನಾಟಕಕಾರ ಅಭಿರಾಮ್ ಭಡ್ಕಮ್ಕರ್ ಇವರ ಮರಾಠಿ ನಾಟಕವನ್ನು ಜಯಂತ ಕಾಯ್ಕಿಣಿ ಕನ್ನಡಕ್ಕೆ ಅನುವಾದಿಸಿದ ಅಂಕದ ಪರದೆ ನಾಟಕವು ವಿದ್ಯಾನಿಧಿ ವನಾರಸೇ ಪ್ರಸಾದ್ ನಿರ್ದೇಶನದಲ್ಲಿ ಪ್ರದರ್ಶನವಾಗಲಿದೆ.

ನಾಳೆ ಸೋಮವಾರ ಸಂಜೆ 7 ಗಂಟೆಗೆ ಸಂಸ್ಕೃತ ನಾಟಕಕಾರ ಭವಭೂತಿ ರಚಿಸಿದ ವಿದ್ಯಾಹೆಗಡೆ, ಭಾರ್ಗವ ಕೆಎನ್, ಎಮ್. ಎಚ್.ಗಣೇಶ ಸಂಗೀತ ವಿನ್ಯಾಸ ಹಾಗೂ ಹಿರಿಯ ರಂಗನಿರ್ದೇಶಕ ಕೆ. ವಿ. ಅಕ್ಷರ ಇವರ ಕನ್ನಡ ರೂಪ ಮತ್ತು ನಿರ್ದೇಶನದಲ್ಲಿ ಸಂಸ್ಕೃತ ನಾಟಕ ಮಾಲತಿ ಮಾಧವ ನಾಟಕ ಪ್ರದರ್ಶನಗೊಳ್ಳಲಿದೆ.

ನೀನಾಸಂ ತಿರುಗಾಟದ ನಾಟಕಗಳು ಉಚಿತ ಪ್ರವೇಶವಿದ್ದು, ರಂಗಾಸಕ್ತರು, ಸಾಹಿತಿಗಳು, ಸಾರ್ವಜನಿಕರು ಭಾಗವಹಿಸುವಂತೆ ಒಡನಾಟ ರಂಗ ತಂಡದ ಮುಖ್ಯಸ್ಥ ಎನ್.ವಿ.ಶ್ರೀಕಾಂತ್ ಕೋರಿದ್ದಾರೆ.

## ಹರಪನಹಳ್ಳಿಯಲ್ಲಿ ಇಂದು ರಾಜ್ಯೋತ್ಸವ



ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆಯಿಂದ ಗೊರವಿನ ತೋಟದ ಬಸಮ್ಮ ಕಲಾಮಂದಿರದಲ್ಲಿ ಇಂದು ಮಧ್ಯಾಹ್ನ 3ಗಂಟೆಗೆ ಕನ್ನಡ ರಾಜ್ಯೋತ್ಸವ ಮತ್ತು ಕನ್ನಡ ಸೇವಕ ಪ್ರಶಸ್ತಿ ಪ್ರದಾನ ಹಮ್ಮಿಕೊಳ್ಳಲಾಗಿದೆ.

ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಸೇವಾ ಸಂಸ್ಥೆಯ ಅಧ್ಯಕ್ಷರಾದ ಸಪ್ನ ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸುವರು.

ಸುವರ್ಣ ಪ್ರಶಸ್ತಿ ಪುರಸ್ಕೃತ ಡಾ.ಟಿ.ಎಂ.ಚಂದ್ರಶೇಖರಯ್ಯ ಅವರಿಗೆ ಗೌರವ ಸಮರ್ಪಣೆ ಮಾಡಲಾಗುವುದು. ಮುಖ್ಯ ಅತಿಥಿಗಳಾಗಿ ಪುರಸಭೆ ಸದಸ್ಯ ಎಂ.ವಿ. ಅಂಜಿನಪ್ಪ, ಪ್ರಗತಿಪರ ಚಿಂತಕ ಕೋಡಿಹಳ್ಳಿ ಭೀಮಪ್ಪ, ಎಂ.ಪಿ.ನಾಯ್ಕ, ನಿವೃತ್ತ ಶಿಕ್ಷಕ ಮೆಹತಾಬ್ ಅವರು ಭಾಗವಹಿಸಲಿದ್ದಾರೆ. ಕನ್ನಡ ಉಪನ್ಯಾಸಕ ಎಚ್. ಮಲ್ಲಿಕಾರ್ಜುನ್ ವಿವಿಧ ಕ್ಷೇತ್ರಗಳ 25 ಜನ ಸಾಧಕರಿಗೆ ಸಂಸ್ಥೆಯಿಂದ ಕನ್ನಡ ಸೇವಕ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ವಿವಿಧ ತಾಲ್ಲೂಕುಗಳ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ದೇವರ ಮನೆ ಕೊಟ್ರೇಶ್, ಅಂಗಡಿ ವೀರೇಶ್, ಟಿ.ಪಿ.ವೀರೇಂದ್ರ, ಗೂಳಪ್ಪ ಹುಲಿಮನಿ, ಡಾ. ಮಾರುತಿ ಗುಂಡಿ, ಕೆ.ಉಚ್ಚಂಗೆಪ್ಪ ಮತ್ತಿತರರು ಭಾಗವಹಿಸುವರು.

## ಮೂರೂ ಕ್ಷೇತ್ರದಲ್ಲೂ ಕಾಂಗ್ರೆಸ್‌ಗೆ ಗೆಲವು ಶಾಸಕ ಬಸವರಾಜ ಶಿವಗಂಗಾ ವಿಶ್ವಾಸ



ದಾವಣಗೆರೆ, ನ.9-ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳೇ ಮೂರೂ ಕ್ಷೇತ್ರದಲ್ಲಿ ಜಯ ಸಾಧಿಸಲಿದ್ದಾರೆ ಎಂದು ಚನ್ನಗಿರಿ ಶಾಸಕ ಬಸವರಾಜು ವಿ. ಶಿವಗಂಗಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶಿಗ್ಗಾಂವ-ಸವಣೂರು ಉಪ ಚುನಾವಣೆಯಲ್ಲಿ ಶಿಶುವಿನಹಾಳ ಗ್ರಾಮ ಪಂಚಾಯ್ತಿ ಚುನಾವಣೆ ಜವಾಬ್ದಾರಿ ತೆಗೆದುಕೊಂಡಿರುವ ಬಸವರಾಜ್, ಕಾಂಗ್ರೆಸ್ ಅಭ್ಯರ್ಥಿ ಯಾಸಿನ್ ಅಹಮ್ಮದ್ ಖಾನ್ ಪಠಾಣ ಪರವಾಗಿ ಜನ ಬೆಂಬಲವಿದ್ದು ಗೆದ್ದೇ ಗೆಲ್ಲುತ್ತಾರೆ ಎಂದು ತಿಳಿಸಿದರು.

ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿಯೂ ಕಾಂಗ್ರೆಸ್‌ಗೆ ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲ್ಲುವುದರಲ್ಲಿ ಯಾವುದೇ ಸಂಶಯವಿಲ್ಲ. ಬಿಜೆಪಿಯವರು ಏನೇ ಹೇಳಿದರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಗೆಲವು ನಿಶ್ಚಿತ ಎಂದರು. ಯುವ ಮುಖಂಡ ಗಿರೀಶ್ ಸಂತೇಬೆನ್ನೂರು ಸೇರಿದಂತೆ ಸ್ಥಳೀಯ ಕಾಂಗ್ರೆಸ್ ನಾಯಕರು ಉಪಸ್ಥಿತರಿದ್ದರು.

## ಕುಂಭಮೇಳ : ಪ್ರಯಾಗ್‌ರಾಜ್ ರೈಲು ನಿಲ್ದಾಣದಲ್ಲಿ ಕನ್ನಡದ ಕಂಪು

ಬೆಂಗಳೂರು, ನ.9- ಮಹಾ ಕುಂಭಮೇಳದ ಪ್ರಯುಕ್ತ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ (ಅಲಹಾಬಾದ್) ರೈಲು ನಿಲ್ದಾಣದಲ್ಲಿ ಕನ್ನಡದ ಕಂಪು ಕೇಳಿ ಬರಲಿದೆ.

2025ರ ಜನವರಿ 13 ರಿಂದ ಆರಂಭವಾಗಲಿರುವ ಕುಂಭಮೇಳಕ್ಕೆ ತೆರಳುವ ಕನ್ನಡಿಗರಿಗೆ ಅನುಕೂಲ ಆಗಲಿ ಎಂದು ಪ್ರಯಾಗ್‌ರಾಜ್‌ನ ರೈಲು ನಿಲ್ದಾಣಗಳಲ್ಲಿನ ಎಲ್ಲ ಪ್ರಕಟಣೆಗಳು ಹಿಂದಿ, ಇಂಗ್ಲಿಷ್, ಕನ್ನಡ ಸೇರಿದಂತೆ 12 ಭಾಷೆಗಳಲ್ಲಿ ಮೂಡಿ ಬರಲಿವೆ ಎಂದು ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಪ್ರಯಾಗ್ ರಾಜ್ ನಲ್ಲಿ ಕನ್ನಡದ ಕಂಪು! 2025ರ ಜನವರಿ 13 ರಿಂದ ಹಿಂದೂಗಳ ಪವಿತ್ರ ಯಾತ್ರಾ ಸ್ಥಳ ಪ್ರಯಾಗ್ ರಾಜ್‌ನಲ್ಲಿ ಕುಂಭಮೇಳ ಆರಂಭವಾಗಲಿದೆ. ಈ ಕುಂಭಮೇಳಕ್ಕೆ ದೇಶದಾದ್ಯಂತ ವಿವಿಧ ಸ್ಥಳಗಳಿಂದ ಭಕ್ತರು ರೈಲುಗಳ ಮೂಲಕ ಆಗಮಿಸುತ್ತಾರೆ. ಈ ವೇಳೆ, ಭಿನ್ನ ಪ್ರಾದೇಶಿಕ ಭಾಷೆ ಮಾತನಾಡುವವರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ, ಕುಂಭಮೇಳದ ವೇಳೆ ಪ್ರಯಾಗ್ ರಾಜ್ ರೈಲ್ವೆ ನಿಲ್ದಾಣದಲ್ಲಿ ಕನ್ನಡ, ಹಿಂದಿ, ಇಂಗ್ಲಿಷ್ ಭಾಷೆ ಸೇರಿದಂತೆ 12 ಭಾಷೆಗಳಲ್ಲಿ ಪ್ರಕಟಣೆ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಪಾಕಿಸ್ತಾನದ ರೈಲು ನಿಲ್ದಾಣದಲ್ಲಿ ಬಾಂಬ್ ದಾಳಿ: 25 ಸಾವು

ಪೇಶಾವರ, ನ.9- ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ಕ್ವೆಟ್ಟಾ ರೈಲು ನಿಲ್ದಾಣದಲ್ಲಿ ಸಂಭವಿಸಿದ ಬಾಂಬ್ ದಾಳಿಯಲ್ಲಿ 25 ಮಂದಿ ಸಾವಿಗೀಡಾಗಿ 30ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಜಾಫರ್ ಎಕ್ಸ್‌ಪ್ರೆಸ್ ರೈಲು ಫ್ಲಾಟ್‌ಫಾರಂಗೆ ಆಗಮಿಸುವುದಕ್ಕೂ ಮುನ್ನ ಬೆಳಿಗ್ಗೆ 9 ಗಂಟೆ ಸುಮಾರಿಗೆ ನಿಲ್ದಾಣದ ಬುಕ್ಕಿಂಗ್ ಕಚೇರಿಯಲ್ಲಿ ಸ್ಫೋಟ ಸಂಭವಿಸಿದೆ ಎಂದು ಪಾಕಿಸ್ತಾನದ ಪೊಲೀಸ್ ಅಧಿಕಾರಿಗಳು ಖಚಿತ ಪಡಿಸಿದ್ದಾರೆ.

ನಿಲ್ದಾಣದಲ್ಲಿರುವ ಸಿಸಿ ಕ್ಯಾಮರಾದಲ್ಲಿ ಸ್ಫೋಟದ ದೃಶ್ಯ ಸೆರೆಯಾಗಿದೆ. ಈ ವಿಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿವೆ.

ಸಾವಿನ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದು, ಘಟನೆ ಸಂಬಂಧ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

# ವಕ್ಫ್ ಹೆಸರು ರದ್ದತಿಗೆ ಆಗ್ರಹ

**(1ನೇ ಪುಟದಿಂದ)** ವಾಸಿಸುವ ಜನರಿಗೆ ನೋಟಿಸ್ ಸಹ ನೀಡಿಲ್ಲ ಎಂದು ದೂರಿದರು.

ಹಿರಿಯರು ಬಾಳಿ ಬದುಕಿದ ಮನೆಯಲ್ಲಿ ವಾಸವಿರುವ ಈ ಬಡಾವಣೆಯ ಜನರಿಗೆ ತಮ್ಮ ಆಸ್ತಿಯಲ್ಲಿ ವಕ್ಫ್ ಹೆಸರು ನೋಂದಣಿ ಆಗಿರುವುದು ಬಡಾವಣೆಯ ನಿವಾಸಿಗಳ ನಿದ್ದೆಗೆಡಿಸಿದೆ ಎಂದು ಹೇಳಿದರು.

ಪಿ.ಜೆ ಬಡಾವಣೆಯ ಒಂದಿಂಚೂ ಜಾಗವೂ ವಕ್ಫ್ ಪಾಲಾಗಲು ಬಿಜೆಪಿ ಬಿಡುವುದಿಲ್ಲ. ಈ ಭಾಗದ ನಾಗರಿಕರ ಪರವಾಗಿ ಪಾಲಿಕೆ ಸದಸ್ಯರು ಹೋರಾಟ ಮಾಡಲಿದ್ದು, ನ್ಯಾಯ ಸಿಗುವ ವರೆಗೂ ನಮ್ಮ ಹೋರಾಟ ನಿರಂತರವಾಗಲಿದೆ ಎಂದರು.

ನಗರದಲ್ಲಿ ಸರ್ಕಾರಿ ಜಾಗವನ್ನು ಖಾಸಗಿ ಸಂಸ್ಥೆಗೆ ನೋಂದಣಿ ಯಾಗಿದ್ದರ ವಿರುದ್ಧ ಸೂಕ್ತ ತನಿಖೆ ಹಾಗೂ

**ಪಿ.ಜೆ ಬಡಾವಣೆಯ ಒಂದಿಂಚೂ ಜಾಗವೂ ವಕ್ಫ್ ಪಾಲಾಗಲು ಬಿಡುವುದಿಲ್ಲ**

**- ಪ್ರಸನ್ನ ಕುಮಾರ್, ಪಾಲಿಕೆ ವಿಪಕ್ಷ ನಾಯಕ**

ಕಾನೂನು ಕ್ರಮ ಕೈಗೊಂಡು ಸಾರ್ವಜನಿಕರ ಸರ್ಕಾರಿ ಆಸ್ತಿ ರಕ್ಷಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಈ ವೇಳೆ ಪಾಲಿಕೆ ಸದಸ್ಯರಾದ ಆರ್. ಶಿವಾನಂದ್, ಶಿವಪ್ರಕಾಶ್, ಮುಖಂಡರಾದ ಸುರೇಶ್ ಗಂಡಗಾಳೆ, ಮಂಜುನಾಥ್, ಯೋಗೇಶ್ ಹೆಗ್ಗಪ್ಪ ಇದ್ದರು.

# ಪಹಣಿಯಲ್ಲಿ ವಕ್ಫ್ ಹೆಸರು : ಹಗಲು ದರೋಡೆ ಕೃತ್ಯ

**(1ನೇ ಪುಟದಿಂದ)** ಕಟ್ಟುತ್ತಾ 'ನಮ್ಮದೇ ಆಸ್ತಿ' ಅಂದುಕೊಂಡು ನೆಮ್ಮದಿಯಿಂದ ಇದ್ದ ಸಾರ್ವಜನಿಕರು ಕೆಟ್ಟ ಕನಸು ಕಂಡಂತೆ ಗಾಬರಿಯಿಂದ ಎದ್ದು ಕುಳಿತುಕೊಳ್ಳುವಂತಾಗಿದೆ.

ರಿಜಿಸ್ಟರ್ ನಲ್ಲಿ ಈ ರೀತಿ ವಕ್ಫ್ ಆಸ್ತಿ ಎಂದು ದಾಖಲಾಗಿರುವುದರಿಂದ ಈ ಜಾಗವನ್ನು ಮಾರಲು ಆಗುವುದಿಲ್ಲ, ಬ್ಯಾಂಕ್ ಲೋನ್ ಪಡೆಯಲು ಸಾಧ್ಯವಾಗುವುದಿಲ್ಲ ಎಂದು ತಿಳಿಸುತ್ತಾರೆ. ಇದು ಕೇವಲ ದಾವಣಗೆರೆಗೆ ಮಾತ್ರವಲ್ಲ, ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಲ್ಲ, ದೇಶದಲ್ಲಿಯೇ ಅನೇಕ ರಾಜ್ಯಗಳಲ್ಲಿ 'ಯೋಜನಾ ಬದ್ಧ'ವಾಗಿ ಇಂತಹ ಕುತಂತ್ರ ಮಾಡಲಾಗುತ್ತಿದೆ ಎಂಬುದು ಎಲ್ಲ ದೇಶವಾಸಿಗಳಿಗೆ ಆತಂಕಕಾರಿ ವಿಷಯವಾಗಿರುತ್ತದೆ.

ಮೊನ್ನೆ ಮಧ್ಯಪ್ರದೇಶದ ಹೈಕೋರ್ಟಿನಲ್ಲಿ ಅಲ್ಲಿಯ ವಕ್ಫ್ ಸಂಸ್ಥೆಯೊಂದು ನೂರಾರು ವರ್ಷ ಹಳೆಯದಾದ 'ಪುರಾತತ್ವ ಇಲಾಖೆಯ ಕಟ್ಟಡ'ವನ್ನು 'ತನ್ನ ಆಸ್ತಿ' ಎಂದು ಘೋಷಿಸಬೇಕೆಂದು ಅರ್ಜಿ ಸಲ್ಲಿಸಿದಾಗ, ಕೆರಳಿದ ಮುಖ್ಯ ನ್ಯಾಯಾಧೀಶರು 'ಇಡೀ ಭಾರತವನ್ನೇ ವಕ್ಫ್ ಆಸ್ತಿ ಎಂದು ಯಾಕೆ ಘೋಷಿಸಬಾರದು..?' ಎಂದು ಪ್ರಶ್ನಿಸಿರುವುದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಅದನ್ನು ನೋಡಿದಾಗ ನನಗೆ ಕೇವಲ ಪಿ.ಜೆ. ಬಡಾವಣೆಯ ಒಂದು ಭಾಗ ಮಾತ್ರದ ಬದಲು 'ಇಡೀ ದಾವಣಗೆರೆ'ಯನ್ನೇ 'ಪೂರ್ಣ ಖಬರ ಸ್ಥಾನ' ಎಂದು ಘೋಷಿಸುವುದು ಒಳ್ಳೆಯದು ಎನಿಸಿತು. ಇಂತಹ ದುರವಸ್ಥೆಗೆ ನಾವು ತಲುಪಲು ಪ್ರಮುಖ ಕಾರಣ ನಮ್ಮ ಮಧ್ಯ ಇರುವ ಸಾಮಾಜಿಕ ಸಾಮರಸ್ಯದ ಕೊರತೆ, ಜಾತಿ-ಜಾತಿಗಳ ಮಧ್ಯೆ ಮೇಲು, ಕೀಳು ಭಾವನೆ ಮೂಡಿಸಿ ಒಡೆದು ಆಳುತ್ತಾ ಅಧಿಕಾರ ಹಿಡಿಯುವ ಮಾನಸಿಕತೆ ಇರುವ ಪಕ್ಷಗಳು.

ಇಡಿ ಇಡಿಯಾಗಿ ತಮ್ಮ ಬೆಂಬಲಕ್ಕೆ ನೀಡುವ ವ್ಯಕ್ತಿಗಳನ್ನು ಪಕ್ಷಗಳನ್ನು ಆಯ್ಕೆ ಮಾಡುವ ಸಮುದಾಯ ಒಂದು ಕಡೆ, ಬಿಡಿ ಬಿಡಿಯಾಗಿ ಜಾತಿ ಒಳಜಾತಿ, ಪಕ್ಷ ಎಂದು ಕೊಳ್ಳುತ್ತಾ, ಚುನಾವಣೆಯ ಸಮಯದಲ್ಲಿ ಅವರು ನೀಡುವ ಆಸೆ, ಆಮಿಷಗಳಿಗೆ ಬಲಿಯಾಗಿ ಅವರನ್ನು ಆಯ್ಕೆ ಮಾಡುವ ಜನ ಸಮುದಾಯ ಹಿಂದೂ ಸಮಾಜ.

ದುಗ್ಗಮ್ಮನ ಹಬ್ಬದಲ್ಲಿ ಬಲಿಗೆ ತೆಗೆದುಕೊಂಡು ಹೋಗುವ ಕುರಿಗೆ ನಾನು ಕಟುಕನ ಕೈಗೆ ಸಿಕ್ಕು ಸಾಯುತ್ತೇನೆ ಎನ್ನುವ ಅರಿವಿಲ್ಲದೇ, ತನಗೆ ಹಾಕಿದ ಹಾರ, ಹಚ್ಚಿದ ಕುಂಕುಮ, ಮಾಡಿದ ಅಲಂಕಾರ, ತನ್ನ ಮೆರವಣಿಗೆಗೆ ಭಾರಿಸುವ ತಮಟೆಯ ಸದ್ದಿನಲ್ಲಿ ಮೆರೆಯುತ್ತಾ ನೆಗೆಯುತ್ತಾ ಬಲಿಪೀಠದೆಡೆಗೆ ನಡೆಯುವ ಕುರಿಯಂತಾಗಿದೆ ಹಿಂದೂಗಳ ಬದುಕು.

ಕೇವಲ ಹಿಂದೂಗಳು ಮಾತ್ರವಲ್ಲ, ಅನೇಕ ಬಡ ಮುಸಲ್ಮಾನರ ಆಸ್ತಿಯನ್ನು ಕೂಡ ವಕ್ಫ್ ಆಸ್ತಿ ಎಂದು ಘೋಷಣೆ ಮಾಡುತ್ತಿರುವುದು ಬಹಿರಂಗವಾಗುತ್ತಿದೆ. ಇಂತಹ ಕಾನೂನನ್ನು ಜಾರಿಗೊಳಿಸಿದ ವ್ಯಕ್ತಿಗಳಿಗೆ, ಪಕ್ಷಗಳಿಗೆ ನಾವೇ ಇನ್ನೂ ಬೆಂಬಲ ನೀಡುತ್ತಿರುವುದು, ಅಂಟಾರ್ಟಿಕಾ ಪ್ರದೇಶದಲ್ಲಿ ವಾಸವಾಗಿರುವ ಪೆಂಗ್ವಿನ್ ಜಾತಿಯ ಪ್ರಾಣಿಗಳು ಒಮ್ಮೊಮ್ಮೆ 'ನಿರ್ಣಯ' ಮಾಡಿ, 'ಸಾಮೂಹಿಕ ಆತ್ಮಹತ್ಯೆ' ಮಾಡಿಕೊಳ್ಳುವ ಗೀಳಿಗೆ ನಾವು ಸೇರಿದ್ದೇವೆಯೇ ಎನಿಸುತ್ತದೆ.

ಇತ್ತೀಚೆಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿರುವ ಮಾತು ನಮಗೆಲ್ಲ 'ಎಚ್ಚರಿಕೆಯ ಗಂಟೆ' ಯಾಗಬೇಕಾಗಿದೆ. 'ಬಟೆಂಗೇ ತೋ ಕಟೇಂಗೇ'..( ನಾವು ವಿಭಜನೆ ಆದಷ್ಟೂ ನಾಶವಾಗುತ್ತೇವೆ)..


ಇಂತಹ ಕರಾಳ ಶಾಸನವನ್ನು, ಜನ ವಿರೋಧಿ ಶಾಸನವನ್ನು ತಿದ್ದುಪಡಿ ಮಾಡಲು ಇಂದಿನ ಕೇಂದ್ರ ಸರ್ಕಾರ ಪ್ರಯತ್ನ ಮಾಡಿದರೆ, ಅದನ್ನು ತಮ್ಮ ರಾಜಕೀಯ ಕಾರಣಗಳಿಗಾಗಿ ವಿರೋಧಿಸುವ ವ್ಯಕ್ತಿಗಳು, ಪಕ್ಷಗಳು, ಅದನ್ನು ಸಮರ್ಥಿಸಿಕೊಳ್ಳುವ ನಾಯಕರುಗಳು ಇದ್ದಾರೆ.

ಈ ಷಡ್ಯಂತ್ರವನ್ನು ತಪ್ಪಿಸಿ, ನಮ್ಮ ಮಕ್ಕಳು ಮೊಮ್ಮಕ್ಕಳು ಹಿಂದೂಗಳಾಗಿಯೇ ಬದುಕಬೇಕು ಎಂದಿದ್ದರೆ ಈಗ ಎಲ್ಲಾ ಹಿಂದೂಗಳು, ಒಟ್ಟಾಗಿ ಒಂದಾಗಿ ಯಾರು ತಮ್ಮ ಹಿತರಕ್ಷಣೆ ಮಾಡುತ್ತಾರೆಯೋ ಅಂತವರಿಗೆ ಬೆಂಬಲ ನೀಡುವ ಅನಿವಾರ್ಯ ಕಾಲಘಟ್ಟದಲ್ಲಿದ್ದೇವೆ.

ಹಿಂದೂ ಸಮಾಜದ ಎಲ್ಲ ಮಠಾಧೀಶರು ತಮ್ಮ ತಮ್ಮ ವೈಯಕ್ತಿಕ ಅಭಿಪ್ರಾಯಗಳು ಏನೇ ಇದ್ದರೂ ಇಡೀ ಸಮಾಜದ ಉಳಿವಿಗಾಗಿ ತಮ್ಮ ಮಠಗಳ ಪರಂಪರೆಯ ಉಳಿವಿಗಾಗಿ ಕೇಂದ್ರ ಸರ್ಕಾರಕ್ಕೆ ಪತ್ರ ಮುಖೇನ ತಮ್ಮ ಅಭಿಪ್ರಾಯವನ್ನು ತಿಳಿಸಿ ಸಮಾಜದ ಅಸ್ತಿತ್ವವನ್ನು ಉಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ಈಗಲಾದರೂ ನಮ್ಮ ಮುಂದಿನ ಪೀಳಿಗೆಯ ಅಸ್ತಿತ್ವಕ್ಕಾಗಿಯಾದರೂ ಒಂದಾಗುವ ಅವಶ್ಯಕತೆ ಇದೆ.

ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ವಕ್ಫ್ ಬೋರ್ಡ್‌ಗೆ ತಿದ್ದುಪಡಿ ಮಸೂದೆ ತರಲಿದೆ. ಇದು ನಮ್ಮ ಅಸ್ತಿತ್ವದ ಅಂತಿಮ ಅವಕಾಶ. ಯೋಚಿಸಿ ನಿರ್ಣಯಿಸಿ ಎಂದು ಶಿವಯೋಗಿ ಸ್ವಾಮಿ ಅವರು ತಿಳಿಸಿದ್ದಾರೆ.

## ಎ. ಮರುಳಸಿದ್ದಪ್ಪ ನಿಧನ



ದಾವಣಗೆರೆ, #883, 'ಶಾರದ ಕೃಪ' 3ನೇ ಕ್ರಾಸ್, 3ನೇ ಮುಖ್ಯ ರಸ್ತೆ, ಕಸ್ತೂರಿ ಬಾ ಸಮಾಜ ಹತ್ತಿರ, ವಿದ್ಯಾನಗರ ವಾಸಿ ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್

**ಶ್ರೀ ಎ. ಮರುಳಸಿದ್ದಪ್ಪ**

ಇವರು ದಿನಾಂಕ 9.11.2024ರ ಶನಿವಾರ ಬೆಳಿಗ್ಗೆ 10 ಕ್ಕೆ ನಿಧನರಾಧರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.11.2024ರ ಭಾನುವಾರ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ಬೆಳಿಗ್ಗೆ 11 ಗಂಟೆಗೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ , 87623 48091**

## ಡಾ. ಜಿ. ಕೇಶವರಾವ್ ನಿಧನ



ದಾವಣಗೆರೆ ಬಾಲಾಜಿ ನಗರ 7ನೇ ಮೇನ್, 6ನೇ ಕ್ರಾಸ್ ಡೋ. ನಂ. 3545/86 ಎ, ನಿವಾಸಿ ಕಲಾ ಟೈಲರ್ಸ್ ಮನೆತನದವರಾದ ಡಾ. ಜಿ. ಕೇಶವರಾವ್ ಅವರು ದಿನಾಂಕ : 09.11.2024 ರ ಶನಿವಾರ ಬೆಳಿಗ್ಗೆ 10.00 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಅದೇ ದಿನ ಸಂಜೆ 5 ಗಂಟೆಗೆ ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.

**ರಕ್ತ ದಾನ ಶ್ರೇಷ್ಠ ದಾನ**

# ವಾರ ಭವಿಷ್ಯ

**ದಿನಾಂಕ : 10.11.2024 ರಿಂದ 16.11.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಅಪರೂಪಕ್ಕೆ ಅತಿಥಿ ಅಭ್ಯಾಗತರ ಆಗಮಿಸಲಿದ್ದು, ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ. ಆರ್ಥಿಕ ಸಂಕಷ್ಟಗಳು ಕ್ರಮೇಣ ದೂರವಾಗಲಿದ್ದು, ಸ್ವಲ್ಪ ಉಳಿತಾಯಕ್ಕೂ ಯತ್ನಿಸಬಹುದು. ನಿಮ್ಮ ಕಛೇರಿಗೆ ಅಥವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಕಣ್ಮರೆಯಾಗುವ ಸಂಭವವಿದೆ. ಉದ್ಯಮಿಗಳಿಗೆ ಸ್ವಲ್ಪ ಕಾಲ ವ್ಯವಹಾರದಲ್ಲಿ ಗೊಂದಲ ಕಾಣಿಸಿಕೊಳ್ಳಲಿದ್ದು, ಕ್ರಮೇಣ ಅದು ಸರಿಹೋಗಲಿದೆ. ಹಿರಿಯರೊಂದಿಗೆ ಅನುಚಿತವಾಗಿ ನಡೆದು ಕೊಳ್ಳಬೇಡಿ, ಗುರುಗಳ ಸೇವೆ ಮಾಡಿ ಅನ್ನದಾನ ಉತ್ತಮ. ಮಂಗಳ-ಬುಧ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಒದಗಲಿರುವ ಆರ್ಥಿಕ ಸಂಕಷ್ಟಕ್ಕೆ ಮಡದಿಯ ತವರು ಮನೆಯಿಂದ ಹಣಕಾಸಿನ ನೆರವು ಸಿಗಲಿದೆ. ಮನೆಯಲ್ಲಿ ಬೆಲೆಬಾಳುವ ವಡವೆ ವಸ್ತ್ರಗಳು ಕಳ್ಳತನವಾಗುವ ಸಂಭವವಿದ್ದು ಹೆಚ್ಚಿನ ಜಾಗ್ರತೆಯಲ್ಲಿರುವುದು ಉತ್ತಮ, ಅವಿವಾಹಿತ ಮಗಳಿಗೆ ಕಂಕಣ ಭಾಗ್ಯ ಕೂಡಿಬರಲಿದೆ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಮಹಿಳೆಯರ ವೇತನದಲ್ಲಿ ಹೆಚ್ಚಳ, ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕಂತೆ ಫಲಿತಾಂಶ ಬರಲಿದೆ. ಭಾನು-ಸೋಮ-ಗುರು-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ನಿರ್ಮಾಣದ ಹಂತದಲ್ಲಿರುವ ಮನೆಗೆ ಬೇಕಾದ ಸಲಕರಣೆಗಳ ಖರೀದಿ ಜೋರಾಗಿ ನಡೆಯಲಿದೆ, ಹಿಂದೆ ಆರಂಭಿಸಿದ್ದ ಉದ್ಯಮದಲ್ಲಿ ಉದಾಸೀನತೆ ಸಲ್ಲದು, ಕೆಲವು ವಿಚಾರಗಳಲ್ಲಿ ಅಂತಿಮ ನಿರ್ಧಾರ ನಿಮ್ಮದೇ ಆಗಿರಲಿ, ಸೋದರನ ಹಣಕಾಸಿನ ವ್ಯವಹಾರದಲ್ಲಿ ನಿಮ್ಮ ನೆರವು ಸಿಗಲಿದೆ, ವಿದ್ಯಾರ್ಥಿಗಳು ಅಂದಿನ ಪಾಠಗಳನ್ನು ಅಂದೇ ಓದಿ ಮುಗಿಸುವುದು ಮೇಲು, ಬಂಧುಗಳ ಮನೆಯಲ್ಲಿ ನಡೆಯಲಿರುವ ಸಮಾರಂಭಕ್ಕೆ ಪರಿವಾರ ಸಮೇತ ಹೋಗಿ ಭಾಗವಹಿಸುವಿರಿ, ಗೋ ಸೇವೆ ಮಾಡಿ. ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ವ್ಯವಹಾರಕ್ಕೆ ಸಂಬಂಧಿಸಿದ ಕೋರ್ಟ್ ವ್ಯಾಜ್ಯವೊಂದು ನಿಮ್ಮ ಪರವಾಗಿ ಆಗಲಿದೆ, ಇದರಿಂದ ಬಹು ಕಾಲದ ದುಗುಡವೊಂದು ದೂರವಾಗಲಿದೆ. ದೊಡ್ಡ ದೊಡ್ಡ ಉದ್ಯಮಿಗಳಿಗೆ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಮುಕ್ತವಾಗಿ ಸಿಗಲಿದೆ, ಆದರೆ ಇದು ದುರುಪಯೋಗವಾಗದಂತೆ ನೋಡಿಕೊಳ್ಳಬೇಕಷ್ಟೆ. ಮನೆಯಲ್ಲಿ ತಂದೆ-ತಾಯಿಗಳ ಆರೋಗ್ಯದಲ್ಲಿ ತೀವ್ರ ವ್ಯತ್ಯಾಸವಾಗಲಿದ್ದು, ಅದಕ್ಕಾಗಿ ಹೆಚ್ಚಿನ ವೆಚ್ಚವಾಗಬಹುದು ಸದ್ಯಕ್ಕೆ ದೂರದೂರುಗಳಿಗೆ ಪಯಾಣ ಬೇಡ. ಸೋಮ-ಮಂಗಳ-ಬುಧ-ಶುಭ ದಿನಗಳು.

**ಸಿಂಹ ( ಮಖ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಸಾಮಾಜಿಕ ಜವಾಬ್ದಾರಿಯನ್ನು ಹೊರುವ ಮೊದಲು ನಿಮ್ಮ ಇತಿಮಿತಿಯ ಅರಿವಿರುವುದು ಮೇಲು, ಒಮ್ಮತದಿಂದ ಕೆಲಸಗಳನ್ನು ಮಾಡುವುದು ಎಲ್ಲಾ ರೀತಿಯಿಂದ ಸೂಕ್ತ ನಿರ್ಧಾರವಾಗಲಿದೆ, ಸ್ನೇಹಿತರು ಹಾಗೂ ಬಂಧು-ಬಳಗದವರು ಕೊಡಮಾಡುವ ಸಲಹೆ ಸೂಚನೆಗಳನ್ನು ಲಘುವಾಗಿ ಪರಿಗಣಿಸಬೇಡಿ, ನಿರೀಕ್ಷಿತ ಧನ ಸಹಾಯವು ಸಮಯಕ್ಕೆ ಸರಿಯಾಗಿ ಕೈ ಸೇರಲಿದೆ, ವಿಷ ಜಂತುಗಳಿಂದ ಅಪಾಯವಾಗಬಹುದು ಮನೆಯಲ್ಲಿ ಇಷ್ಟರಲ್ಲೇ ಮಂಗಲ ಕಾರ್ಯವೊಂದು ನಡೆಯಲಿದೆ. ಭಾನು-ಸೋಮ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಹೊಸದಾಗಿ ನೌಕರಿಗೆ ಸೇರಿರುವವರು ತಮ್ಮ ಮೇಲಾಧಿಕಾರಿಗಳೊಂದಿಗೆ ವಿನಮ್ರತೆಯಿಂದ ನಡೆದು ಕೊಂಡಲ್ಲಿ ಮಾತ್ರ ಕರ್ತವ್ಯವನ್ನು ಸುಗಮವಾಗಿ ನಿರ್ವಹಿಸಲು ಸಾಧ್ಯ, ಮಕ್ಕಳ ಉದ್ಯೋಗದಲ್ಲಿ ತುಸು ತೊಂದರೆಯಾಗುವ ಸಂಭವವಿದೆ, ಈ ವಾರವೆಲ್ಲಾ ಮತ್ತೊಬ್ಬರ ಮರ್ಜಿಯಲ್ಲೇ ಬದುಕಬೇಕಾಗಬಹುದು, ಕೈಗಾರಿಕೋದ್ಯಮಿಗಳಿಗಿದ್ದ ಕಾರ್ಮಿಕರ ಸಮಸ್ಯೆ ಬಗೆಹರಿಯಲಿದೆ, ಚಿಕ್ಕಮಕ್ಕಳ ಆರೋಗ್ಯವನ್ನು ಅಲಕ್ಷಿಸಬೇಡಿ. ಸಾಧ್ಯವಿದ್ದಲ್ಲಿ ಶ್ರೀ ದುರ್ಗಾಸಪ್ತಶತೀ ಪಠಿಸಿ. ಬುಧ-ಗುರು-ಶನಿ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಕೆಲವೊಮ್ಮೆ ನಾವು ತೋರುವ ಉದಾಸೀನತೆ ಅಥವಾ ಸೋಮಾರಿತನ ಹೇಗೆ ಭವಿಷ್ಯಕ್ಕೆ ಮುಳ್ಳಾಗಲಿದೆ ಎಂಬುದಕ್ಕೆ ಈ ವಾರ ನಿಮ್ಮನ್ನು ಉದಾಹರಣೆಯಾಗಿ ಕೊಡಬಹುದು. ಮಹಿಳೆಯರಿಗೆ ಉದ್ಯೋಗ ಕ್ಷೇತ್ರದಲ್ಲಿ ಅನೇಕ ಅಡಚಣೆಗಳು ಎದುರಾಗಲಿವೆ. ಈ ಸಮಯದಲ್ಲಿ ಅನುಭವಿಗಳಾದ ಹಿರಿಯರ ಸಲಹೆ ಸೂಚನೆ ಪಡೆಯುವುದು ಉತ್ತಮ ನಿರ್ಧಾರವಾಗಲಿದೆ, ಆದಾಯದ ಮೂಲದಲ್ಲಿ ತುಸು ಕೊರತೆ ಕಂಡುಬಂದರೂ ದೈನಂದಿನ ಬದುಕಿಗೇನೂ ತೊಂದರೆಯಿಲ್ಲ. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಪ್ರತಿದಿನವೂ ಮಾಡಬೇಕಾಗಿರುವ ಕೆಲಸ-ಕಾರ್ಯಗಳಿಗೊಂದು ವೇಳಾಪಟ್ಟಿಯನ್ನು ಸಿದ್ಧಪಡಿಸುವುದು ಉತ್ತಮ, ಇಲ್ಲವಾದಲ್ಲಿ ಮೂಲ ಆದಾಯಕ್ಕೆ ಪೆಟ್ಟು ಬೀಳಬಹುದು.ಯುವಕರು ಕೃಷಿ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೊದಲು ಅದರ ಆಳಗಲ ಅರಿವಿರುವುದು ಲೇಸು. ಹೆಚ್ಚುತ್ತಿರುವ ಆದಾಯದಲ್ಲಿ ಸ್ವಲ್ಪಭಾಗವನ್ನು ಉಳಿತಾಯದ ಕಡೆ ತಿರುಗಿಸುವುದು ಮೇಲು. ಪ್ರೇಮಿಗಳು ಬದುಕಿನ ಬಗ್ಗೆ ಒಂದು ನಿರ್ಧಾರಕ್ಕೆ ಬರುವುದು ಉತ್ತಮ. ಗೋ ಸೇವೆ ಮಾಡಿರಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಢ.ಬೆ.)**

ಅರ್ಹತೆಯುಳ್ಳ ಪ್ರತಿಭಾವಂತರಿಗೆ ಹತ್ತು ಹಲವು ಅವಕಾಶಗಳು ತಾವಾಗಿಯೇ ಹುಡುಕಿ ಕೊಂಡು ಬರಲಿವೆ, ಆದರೆ ಆಯ್ಕೆ ಉತ್ತಮವಾಗಿರಲಿ. ಬಂಧುಗಳೊಂದಿಗೆ ಅನಾವಶ್ಯಕವಾಗಿ ವಾಗ್ವಾದ ಮಾಡಬೇಡಿ, ಇದರಿಂದ ಪರಸ್ಪರ ನಿಷ್ಠೂರದ ಹೊರತು ಬೇರೇನೂ ಪ್ರಯೋಜನವಿಲ್ಲ, ರೈತಾಪಿ ಜನರಿಗೆ ಸರ್ಕಾರದ ನಿಯಮಾವಳಿಗಳಿಂದ ತುಸು ತೊಂದರೆಯಾಗಲಿದೆ, ಇದು ತಾತ್ಕಾಲಿಕವಾದ್ದರಿಂದ ಚಿಂತೆ ಬೇಡ, ಗ್ರಂಥಪಾಲಕರಿಗೆ ಸಾಮಾಜಿಕ ಗೌರವ ದೊರೆಯಲಿದೆ, ಕುಲದೇವತಾರಾಧನೆ ಮಾಡಿ. ಬುಧ-ಗುರು-ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಕಾಣಬೇಕಾಗಿರುವ ಕನಸು ದೊಡ್ಡದಾಗಿದ್ದರೂ, ಅದಕ್ಕೆ ಪೂರಕವಾದ ಅನುಕೂಲತೆಗಳ ಬಗ್ಗೆ ಯೋಚಿಸುವುದು ವಿಹಿತ. ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ ಕಂಡುಬರಲಿದೆ, ಶ್ರಮ ಜೀವಿಗಳಾದ ನಿಮಗೆ ಅದಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ, ಸಂಗೀತಾಸಕ್ತರಿಗೆ ಉತ್ತಮ ಗುರುಗಳು ದೊರೆಯುವರು. ಆಸ್ತಿ ವಿಭಾಗದ ವಿಷಯ ಚರ್ಚೆಗೆ ಬರಲಿದ್ದು, ಅನುಭವಿಗಳಾದ ಹಿರಿಯರ ಆಣತಿಯಂತೆ ನಡೆದುಕೊಳ್ಳುವುದರಲ್ಲೇ ನಿಮ್ಮ ಕ್ಷೇಮವಡಗಿದೆ. ಕುಲದೇವತಾರಾಧನೆ ಮಾಡಿ. ಸೋಮ-ಬುಧ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ನಿಮ್ಮ ಸರಳತೆ ಅಥವಾ ನಿಷ್ಕಪಟತನವನ್ನು ಬೇರೆಯವರು ದುರುಪಯೋಗಪಡಿಸಿ ಕೊಳ್ಳದಂತೆ ಎಚ್ಚರವಹಿಸಿ, ಕಾಲಕ್ಕೆ ತಕ್ಕಂತೆ ಜೀವನ ಶೈಲಿಯಲ್ಲೂ ಬದಲಾವಣೆ ಅನಿವಾರ್ಯವಾಗಲಿದೆ ಎಂಬುದನ್ನು ಮರೆಯಬೇಡಿ, ಪಶುವೈದ್ಯರಿಗೆ ಬೇಡಿಕೆ ಹೆಚ್ಚಲಿದೆ, ನಿರುದ್ಯೋಗಿ ಪದವೀಧರ ಮಗನಿಗೆ ಸಾಧಾರಣ ವೇತನದ ನೌಕರಿ ಇಷ್ಟರಲ್ಲೇ ದೊರೆಯಲಿದೆ, ಮಹಿಳೆಯರು ತಾವಾಡಲಿರುವ ಮಾತಿನ ಪರಿಣಾಮವನ್ನು ಒಂದು ಬಾರಿ ಆಲೋಚಿಸುವುದು ಮೇಲು, ದೂರದೂರುಗಳಿಗೆ ಪ್ರಯಾಣ ಬೇಡ. ಭಾನು-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಕೆಲವೊಮ್ಮೆ ನೀವಾಡಲಿರುವ ಮಾತುಗಳಿಗೆ ನಿಮ್ಮ ಜನರಿಂದಲೇ ಪ್ರತಿರೋಧ ಕಂಡುಬರಲಿದೆ, ತರುಣರು ವಾಸ್ತವಕ್ಕಿಂತ ವಿರುದ್ಧವಾಗಿ ಹೋಗುವ ಮೊದಲು ಅದರ ಪರಿಣಾಮದ ಅರಿವಿರುವುದು ಲೇಸು, ರಾಜಕಾರಣಿಗಳು ಮಾಡುವ ಉತ್ತಮ ಕೆಲಸಗಳಿಗೆ ಅವರ ಪಕ್ಷದ ವರಿಷ್ಠರಿಂದಲೇ ವಿರೋಧ ಕಂಡುಬರಲಿದೆ, ಆದಾಯದಲ್ಲಿ ತುಸು ಏರಿಕೆ ಕಂಡುಬರಲಿದ್ದು, ಅದು ನಿಮ್ಮ ಹಲವು ಆರ್ಥಿಕ ಸಮಸ್ಯೆಗಳಿಗೆ ನೆರವಾಗಲಿದೆ, ಸಾಧು ಸಜ್ಜನರ ದರ್ಶನವಾಗಲಿದ್ದು, ಅವರ ಆಶೀರ್ವಾದ ಪಡೆಯಿರಿ. ಸೋಮ-ಬುಧ-ಗುರು-ಶುಭ ದಿನಗಳು.

**ಈ ವಾರದ ವಿಶೇಷ ದಿನಗಳು :**


**ದಿನಾಂಕ: 11.11.2024ನೇ ಸೋಮವಾರ ಶ್ರೀವಿಜಯ ದಾಸರ ಪುಣ್ಯ ದಿನ. (ಚಿಪ್ಪಗಿರಿ). ದಿನಾಂಕ:12.11.2024ನೇ ಮಂಗಳವಾರ ಏಕಾದಶೀ, ಚಾತುರ್ಮಾಸ್ಯ ಸಮಾಪ್ತಿ, ದ್ವಿದಳ ವ್ರತ ಸಮಾಪ್ತಿ ದಿನಾಂಕ: 13.11.2024ನೇ ಬುಧವಾರ ಉತ್ಥಾನ ದ್ವಾದಶೀ, ತುಳಸೀ ವಿವಾಹ. ದಿನಾಂಕ: 15.11.2024ನೇ ಶುಕ್ರವಾರ ಗೌರೀ ಹುಣ್ಣಿಮೆ, ಕಾರ್ತಿಕ ಸ್ನಾನ ಸಮಾಪ್ತಿ, ಮಹಾಲಯ ಗೌಣ ಪಕ್ಷ ಸಮಾಪ್ತಿ.**

# ಸಿದ್ದರಾಮಯ್ಯ ಅವರ ಗೊಡ್ಡು ಬೆದರಿಕೆಗಳಿಗೆ ಬಗ್ಗುವುದಿಲ್ಲ

ಬೆಂಗಳೂರು, ನ. 9- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೊಡ್ಡು ಬೆದರಿಕೆಗಳಿಗೆ ಬಗ್ಗುವುದೂ ಇಲ್ಲ, ಜಗ್ಗುವುದೂ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಿಡಿ ಕಾರಿದ್ದಾರೆ.

ತಮ್ಮ ವಿರೋಧಿಗಳನ್ನು ಬಗ್ಗುಬಡಿಯಲು ತಮಗೆ ಬೇಕಾದಂತೆ ಆಯೋಗ ಮತ್ತು ತನಿಖಾ ಸಂಸ್ಥೆಗಳನ್ನು ನೇಮಕ ಮಾಡಿ ಹೆದರಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಇದರಿಂದ ಅವರಿಗೂ ಲಾಭವಿಲ್ಲ, ಪ್ರಯೋಜನವೂ ಆಗುವುದಿಲ್ಲ, ನಮಗೂ ಕಾನೂನು ಮತ್ತು ನ್ಯಾಯಾಲಯ ಇದೆ, ಹೋರಾಟ ಮಾಡುತ್ತೇವೆ ಎಂದು ಗುಡುಗಿದರು.



**ನನ್ನ ಆಡಳಿತಾವಧಿಯಲ್ಲಿ ಯಾವುದೇ ತಪ್ಪುಗಳು ನಡೆದಿಲ್ಲ, ಎಲ್ಲಾ ಕಾನೂನಾತ್ಮಕವಾಗಿಯೇ ಆಗಿದೆ, ಯಾವುದೇ ತನಿಖೆಗಳನ್ನಾದರೂ ನಡೆಸಲಿ.**
**- ಯಡಿಯೂರಪ್ಪ**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಅಧಿಕಾರದ ಬುಡ ಅಲ್ಲಾಡುತ್ತಿದೆ, ಭ್ರಷ್ಟಾಚಾರದ ಆರೋಪಗಳು ಅವರನ್ನು ಸುತ್ತುವರೆದಿವೆ, ಒಂದರ ಮೇಲೊಂದು ತನಿಖೆ ನಡೆಯುತ್ತಿದೆ, ಇದರಿಂದ ಹತಾಶರಾಗಿ ಇಂತಹ ತನಿಖೆಗಳನ್ನು ಮಾಡಿ ನಮ್ಮನ್ನು ಹೆದರಿಸಲು ಹೊರಟಿದ್ದಾರೆ.

ಉಪಚುನಾವಣೆ ನಂತರ ಅಧಿಕಾರದಿಂದ ಕೆಳಗಿಳಿಯಬೇಕೆಂಬುದು ಮುಖ್ಯಮಂತ್ರಿ ಅವರಿಗೂ ಗೊತ್ತಿದೆ, ಹೀಗಾಗಿ ವಿರೋಧ ಪಕ್ಷಗಳ ಮೇಲೆ ಸೇಡು ತೀರಿಸಿಕೊಳ್ಳಲು ಹೊರಟಿದ್ದಾರೆ.

ಅವರು ಮಾಡಿರುವ ತಪ್ಪುಗಳು ನ್ಯಾಯಾಲಯ ಮತ್ತು ಜನರ ಕಣ್ಣ ಮುಂದೆ ಇವೆ. ಅದರಿಂದ ಮೊದಲು ಹೊರಬರಲಿ, ಹಳೆಯದನ್ನು ಕೆದಕಿ ವಿರೋಧಿಗಳನ್ನು ಕಟ್ಟಿಹಾಕುವ ಪ್ರಯತ್ನ ಫಲ ಕೊಡುವುದಿಲ್ಲ ಎಂದು ಕಿವಿಮಾತು ಹೇಳಿದರು.

ರಾಜ್ಯದಲ್ಲಿ ನಡೆಯುತ್ತಿರುವ ಮೂರೂ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲು ಕಂಡು ಎನ್‌ಡಿಎ ಮೈತ್ರಿಕೂಟ ಜಯಭೇರಿ ಭಾರಿಸಲಿದೆ.

ಇದರ ಮನವರಿಕೆ ಆಗುತ್ತಿದ್ದಂತೆ ಸಿದ್ದರಾಮಯ್ಯ, ತಾವೂ ಸೇರಿದಂತೆ ತಮ್ಮ ಪಕ್ಷದ ಶಾಸಕರು, ಮುಖಂಡರನ್ನು ಚುನಾವಣೆಗೆ ನಿಯೋಜಿಸಿ, ಆಡಳಿತ ಸ್ತಬ್ಧವಾಗುವಂತೆ ಮಾಡಿದ್ದಾರೆ, ಸೋಲಿನ ಭೀತಿಯಿಂದ ವಿರೋಧಿಗಳನ್ನು ಕಟ್ಟಿಹಾಕುವ ಯತ್ನ ಮಾಡುತ್ತಿದ್ದಾರೆ ಎಂದರು.

# ಜನರ ಗಮನವನ್ನು ಬೇರೆಡೆಗೆ ಸೆಳೆಯಲು ತನಿಖೆಗಳ ಕುತಂತ್ರ

ಬೆಂಗಳೂರು, ನ. 9- ಉಪಚುನಾವಣಾ ಸೋಲು ಹಾಗೂ ಭ್ರಷ್ಟಾಚಾರ ಆರೋಪಗಳಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷಗಳ ನಾಯಕರ ಮೇಲೆ ತನಿಖೆಗಳ ಕುತಂತ್ರ ನಡೆಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಟೀಕಿಸಿದ್ದಾರೆ.



**ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಮತ್ತು ಅವರ ಸರ್ಕಾರ ಹಳೆಯ ವಿಷಯಗಳನ್ನು ಕೆದಕಿ ತನಿಖೆ ನಡೆಸುವುದರಿಂದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಆಗಲಿ, ಬಿಜೆಪಿ ಆಗಲಿ ಹೆದರುವುದಿಲ್ಲ ಎಂದರು.

ಸರ್ಕಾರ ಏನೇ ತನಿಖೆ ನಡೆಸಿದರೂ ಎದುರಿಸುತ್ತೇವೆಯೇ ಹೊರತು ಹೆದರುವುದಿಲ್ಲ, ಹಿಂದಿನ ಆಡಳಿತದಲ್ಲಿ ತಾವು ಮತ್ತು ತಮ್ಮ ಮಂತ್ರಿಗಳು ಮಾಡಿದ ಭ್ರಷ್ಟಾಚಾರಗಳಿಂದ ತಪ್ಪಿಸಿಕೊಳ್ಳಲು ಲೋಕಾಯುಕ್ತವನ್ನು ಮುಚ್ಚಿ, ಎಸಿಬಿ ರಚನೆ ಮಾಡಿಕೊಂಡರು.

ಸಿದ್ದರಾಮಯ್ಯ ಮಾಡಿದ ಈ ಕುತಂತ್ರಕ್ಕೆ ನ್ಯಾಯಾಲಯ ಸರಿಯಾಗಿ ಬುದ್ಧಿ ಕಲಿಸಿದೆ, ತಾವು ಎಸಗಿರುವ ಭ್ರಷ್ಟಾಚಾರಗಳನ್ನು ಮುಚ್ಚಿ ಹಾಕಲು ಒಂದಲ್ಲಾ ಒಂದು ಪ್ರಯತ್ನ ಮಾಡುತ್ತಿದ್ದಾರೆ.

ತಮ್ಮ ವಿರುದ್ಧ ಬಂದಿರುವ ಆರೋಪಗಳನ್ನು ಜನರ ಮನಸ್ಸಿನಿಂದ ಮರೆಮಾಚಲು ಒಂದಲ್ಲಾ ಒಂದು ವಿಷಯವನ್ನು ತರುತ್ತಿದ್ದಾರೆ.

ಇದೀಗ ಕೋವಿಡ್ ಸಮಯದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ತನಿಖೆಗೆ ಆದೇಶಿಸಿದ್ದಾರೆ, ತಮ್ಮ ವಿರೋಧಿಗಳನ್ನು ಕಟ್ಟಿಹಾಕಲು ತಮಗೆ ಬೇಕಾದಂತೆ ಆಯೋಗಗಳನ್ನು ಮತ್ತು ತನಿಖಾ ಸಂಸ್ಥೆಗಳನ್ನು ರಚಿಸುವುದರಲ್ಲಿ ಸಿದ್ದರಾಮಯ್ಯ ನಿಸ್ಸೀಮರು.

ಅವರು ಅಧಿಕಾರಕ್ಕೆ ಬಂದಾಗಲೆಲ್ಲಾ ಇಂತಹ ಆಯೋಗಗಳನ್ನು ರಚಿಸುವುದೇ ಒಂದು ಚಾಳಿಯಾಗಿದೆ, ಇವರ ಗೊಡ್ಡು ಬೆದರಿಕೆಗಳಿಗೆ ಯಡಿಯೂರಪ್ಪ ಆಗಲೀ, ಬಿಜೆಪಿಯಾಗಲೀ ಹೆದರುವುದಿಲ್ಲ.

ಉಪಚುನಾವಣೆ ಮುಗಿಯುತ್ತಿದ್ದಂತೆ ಅಧಿಕಾರದಿಂದ ಕೆಳಗಿಳಿಯುತ್ತಾರೆ, ಅದು ಅವರಿಗೂ ತಿಳಿದಿದೆ, ತಮ್ಮ ನಾಯಕರು ಪೂರ್ಣಾವಧಿ ಅಧಿಕಾರ ಮುಗಿಸುತ್ತಾರೆ ಎನ್ನುವವರೂ ಬೆನ್ನ ಹಿಂದೆ ಕುರ್ಚಿಗಾಗಿ ಹೋರಾಟ ಆರಂಭಿಸಿದ್ದಾರೆ.

ಮುಡಾ ಹಾಗೂ ವಾಲ್ಮೀಕಿ ನಿಗಮದ ಹಗರಣಗಳು ಒಂದೆಡೆಯಾದರೆ, ಮತ್ತೊಂದೆಡೆ ರಾಜ್ಯದ ಮೂರೂ ಕ್ಷೇತ್ರಗಳ ಉಪಚುನಾವಣೆಯಲ್ಲೂ ಸೋಲು ಕಾಣಲಿದ್ದಾರೆ. ಮುಖ್ಯಮಂತ್ರಿ ಅವರಿಗೆ ಇದರ ಮನವರಿಕೆ ಆಗಿದೆ, ಈ ಎಲ್ಲಾ ಅಂಶಗಳನ್ನು ಜನರಿಂದ ಮರೆಮಾಚಲು ವಿರೋಧಿಗಳ ಮೇಲೆ ಇಲ್ಲಸಲ್ಲದ ತನಿಖಾಸ್ತ್ರಗಳನ್ನು ಪ್ರಯೋಗ ಮಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

# ದೊಡ್ಡಬಾತಿ ಕೆರೆ ಅಭಿವೃದ್ಧಿಗೆ 12 ಕೋಟಿ ಮೀಸಲು : ಎಸ್ಸೆಸ್ಸೆಂ

(1ನೇ ಪುಟದಿಂದ) ಶೀಘ್ರದಲ್ಲೇ ಉತ್ತರ ಭಾಗದಲ್ಲಿ ಆಶ್ರಯ ಯೋಜನೆಯಡಿಯ ಕಾರ್ಯಗಳು ಜಾರಿಯಾಗಲಿವೆ. ಗ್ರಾಮಗಳಲ್ಲಿ ಸ್ವಚ್ಛತಾ ಕಾರ್ಯಗಳು ನಡೆಯಬೇಕು. ಈ ಹಿನ್ನೆಲೆಯಲ್ಲಿ ಬೇತೂರು ಪಂಚಾಯ್ತಿಗೆ ರೂ. 35 ಲಕ್ಷ ವೆಚ್ಚದಲ್ಲಿ ಜಟ್ಟಿಂಗ್ ಮಿಷನ್ ನೀಡಲಾಗಿದೆ. ಮುಂದೆ ಎರಡು ಪಂಚಾಯ್ತಿಗೆ ಒಂದು ಜಟ್ಟಿಂಗ್ ಮಿಷನ್ ನೀಡುವ ಯೋಜನೆ ರೂಪಿಸಲಾಗುವುದು. ರಾಜ್ಯದಲ್ಲಿಯೇ ದಾವಣಗೆರೆ ಜಿಲ್ಲೆಯನ್ನು ಮಾದರಿ ಜಿಲ್ಲೆಯಾಗಿಸಬೇಕು ಎಂದು ಸಚಿವರು ತಿಳಿಸಿದರು.

ಮುಖ್ಯ ಅತಿಥಿಗಳಾಗಿದ್ದ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಮಹಿಳೆಯರು ಕುಟುಂಬ ನಿರ್ವಹಣೆಯ ಜತೆಗೆ ಉತ್ತಮ ಸಮಾಜ ನಿರ್ಮಾಣಕ್ಕೂ ಮುಂದಾಗಬೇಕು, ಜಿಲ್ಲಾಡಳಿತ ಭವನದಲ್ಲಿ ಸಂಸದರ ಸಂಪರ್ಕ ಕಚೇರಿ ಇದ್ದು, ನಿಮ್ಮೆಲ್ಲ ಏನೇ ಸಮಸ್ಯೆಗಳಿದ್ದರೂ ಕಚೇರಿಗೆ ಬನ್ನಿ, ನಿಮ್ಮೆಲ್ಲರ ಸಮಸ್ಯೆಗಳಿಗೆ ಕಾಂಗ್ರೆಸ್ ಪಕ್ಷವು ಸದಾ ಜತೆಗಿರುವುದು ಎಂದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಉಚ್ಚಂಗಿದುರ್ಗ ರಾಮಘಟ್ಟದ ರೇವಣಸಿದ್ದ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿದ್ದರು. ಮಂಜುಳಾ ಜೆಸಿಬಿ ಹನುಮಂತಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ಜೆಸಿಬಿ ಹನುಮಂತಪ್ಪ, ಕೆ.ಜಿ ಉಮೇಶ್, ಬಾತಿ ಬಸವರಾಜ್, ರೇಖಾ ಸತ್ಯನಾರಾಯಣ, ಮಾಗಾನಹಳ್ಳಿ ಪರಶುರಾಮ್, ಬೂದಾಳ್ ಬಾಬು, ಬಾತಿ ಶಿವಕುಮಾರ್, ಹುಲ್ಮನಿ ಗಣೇಶ್, ದೊಡ್ಡಬಾತಿ ದೇವಸ್ಥಾನಗಳ ಸ್ವಾಗತ ಕಮಿಟಿಯವರು, ಧರ್ಮದರ್ಶಿಗಳು, ಗ್ರಾಮದ ಮುಖಂಡರು ಇತರರು ಇದ್ದರು.

### ಸ್ಥಳದಲ್ಲೆ ಸಮಸ್ಯೆಗಳಿಗೆ ಸ್ಪಂದಿಸಿದ ಸಚಿವರು

ವೇದಿಕೆ ಕಾರ್ಯಕ್ರಮದಲ್ಲಿ ಸಚಿವರು ಭಾಷಣ ಪೂರೈಸಿದಾಗ ಗ್ರಾಮದ ಮಹಿಳೆಯೊಬ್ಬರು ಬಾತಿಯಿಂದ ಹರಿಹರಕ್ಕೆ ಬಸ್ ಸೌಲಭ್ಯ ಕಲ್ಪಿಸುವಂತೆ ಕೋರಿದರು. ಸಚಿವರು ತಕ್ಷಣ ಕೆ.ಎಸ್. ಆರ್.ಟಿ.ಸಿ ಅಧಿಕಾರಿಗಳಿಗೆ ಕರೆ ಮಾಡಿ, ಸಮಸ್ಯೆ ಹೇಳುವಂತೆ ತಮ್ಮ ಫೋನ್ ಮಹಿಳೆಗೆ ನೀಡಿದರು. ಮಹಿಳೆಯು ಅಧಿಕಾರಿಗೆ ಸಮಸ್ಯೆ ತಿಳಿಸಿದರು.

## ಗ್ಲಾಸ್‌ಹೌಸ್‌ನಲ್ಲಿ ಇಂದು ಸಾಂಸ್ಕೃತಿಕ ಕಾರ್ಯಕ್ರಮ

ದಾವಣಗೆರೆ ಜಿಲ್ಲಾಡಳಿತ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಇಂದು ಸಂಜೆ 5.30ಕ್ಕೆ ಗಾಜಿನ ಮನೆಯಲ್ಲಿ ಸುವರ್ಣ ಸಂಭ್ರಮ ನಡೆಯಲಿದೆ.

ಇಂದು ಆನಂದಗೌಡ ಪಾಟೀಲ್ ಮತ್ತು ಸಂಗಡಿಗರಿಂದ ಹಿಂದೂ ಸ್ತಾನಿ ಸಂಗೀತ, ಸವಿತಾ ಚಿರುಕುಣಯ್ಯ ಪೂಜಾ ಕುಣಿತ, ನಮನ ಅಕಾಡೆಮಿಯವರಿಂದ ನೃತ್ಯರೂಪಕ ಏರ್ಪಾಡಾಗಿದೆ.

## ತಲೆ ಮರೆಸಿಕೊಂಡ ಕೆಫೆ ಸ್ಫೋಟ ಆರೋಪಿ: ಎನ್‌ಐಎ ಶಂಕೆ

ಬೆಂಗಳೂರು, ನ.8- 'ನಗರದ ಬ್ರೂಕ್‌ಫೀಲ್ಡ್‌ನ ರಾಮೇಶ್ವರಂ ಕೆಫೆಯಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ ಆರನೇ ಆರೋಪಿ ಫೈಸಲ್ ಎಂಬಾತ ಪಾಕಿಸ್ತಾನದಲ್ಲಿ ತಲೆಮರೆಸಿಕೊಂಡಿದ್ದಾನೆ' ಎಂದು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಶಂಕೆ ವ್ಯಕ್ತಪಡಿಸಿದೆ.

ಇತ್ತೀಚೆಗೆ ಕೋರ್ಟ್ ಸಲ್ಲಿಸಿರುವ ಹೆಚ್ಚುವರಿ ದೋಷಾರೋಪ ಪಟ್ಟಿಯಲ್ಲಿ ತನಿಖಾಧಿಕಾರಿಗಳು ಈ ಅಂಶ ಉಲ್ಲೇಖಿಸಿದ್ದು, ಪ್ರಕರಣದಲ್ಲಿ ಪಾಕಿಸ್ತಾನದ ನಂಟಿರುವ ಶಂಕೆ ವ್ಯಕ್ತಪಡಿಸಿದ್ದಾರೆ.

ಕಳೆದ ಮಾರ್ಚ್ 1ರಂದು ಕೆಫೆಗೆ ಬಂದಿದ್ದ ಶಂಕಿತನೊಬ್ಬ ಬ್ಯಾಗ್‌ನಲ್ಲಿ ತಂದಿದ್ದ ಕಚ್ಚಾ ಬಾಂಬ್ ಅನ್ನು ಕೆಫೆಯಲ್ಲಿ ಇಟ್ಟು ಪರಾರಿ ಆಗಿದ್ದ. ಗ್ರಾಹಕರು ಗಾಯಗೊಂಡಿದ್ದರು.

ತನಿಖೆ ನಡೆಸಿದ್ದ ಎನ್‌ಐಎ ಅಧಿಕಾರಿಗಳು, ಪಶ್ಚಿಮ ಬಂಗಾಳದಲ್ಲಿ ಶಂಕಿತ ಉಗ್ರರಾದ ಮುಸಾವೀರ್ ಹುಸೇನ್ ಶಾಜೀದ್ ಹಾಗೂ ಅಬ್ದುಲ್ ಮಥೀನ್ ಅಹ್ಮದ್ ತಾಹಾ ಅವರನ್ನು ಬಂಧಿಸಿದ್ದರು. ಇಬ್ಬರೂ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯವರು. ಶಂಕಿತರ ವಿಚಾರಣೆ ವೇಳೆ ಹಲವು ಸ್ಫೋಟಕ ವಿಚಾರಗಳು ಬಯಲಾಗಿದ್ದವು ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಮುಸಾವೀರ್ ಹುಸೇನ್ ಶಾಜೀದ್ ಹಾಗೂ ಅಬ್ದುಲ್ ಮಥೀನ್ ಅಹ್ಮದ್ ತಾಹಾ ವಿರುದ್ಧ ನಗರದ ರಾಷ್ಟ್ರೀಯ ತನಿಖಾ ದಳದ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ತನಿಖಾಧಿಕಾರಿಗಳು ಎರಡು ಹಂತದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಈ ಇಬ್ಬರು ಶಂಕಿತರ ಜತೆಗೆ ಫೈಸಲ್ ನಂಟು ಹೊಂದಿದ್ದ ಎನ್ನಲಾಗಿದೆ.

## ಬಿಎಸ್‌ವೈ, ಶ್ರೀರಾಮುಲು ವಿರುದ್ಧ ತನಿಖೆಗೆ ಶಿಫಾರಸ್ಸು

(1ನೇ ಪುಟದಿಂದ) ಯಡಿಯೂರಪ್ಪ ಮತ್ತು ಶ್ರೀರಾಮುಲು ಇದ್ದು, ತನಿಖೆ ನಡೆಸುವಂತೆ ಮಾಡಿರುವ ಶಿಫಾರಸ್ಸನ್ನು ಬಹಿರಂಗಪಡಿಸಿದ್ದಾರೆ.

ಏಪ್ರಿಲ್ 2020ರಲ್ಲಿ ಚೀನಾದ ಎರಡು ಕಂಪನಿಗಳಿಂದ 3 ಲಕ್ಷ ಯೂನಿಟ್ ಪಿಪಿಇ ಕಿಟ್‌ಗಳನ್ನು ಅತ್ಯಂತ ದುಬಾರಿ ದರಕ್ಕೆ ಖರೀದಿಸಿರುವುದಕ್ಕೆ ಯಾವುದೇ ನಿಖರವಾದ ಕಾರಣವಿಲ್ಲ.

ಚೀನಾದ ಡಿಹೆಚ್‌ಬಿ ಗ್ಲೋಬಲ್ ಹಾಂಕಾಂಗ್ ಮತ್ತು ಬಿಗ್ ಫಾರ್ಮಾಸ್ಯೂಟಿಕಲ್ಸ್‌ನಿಂದ ಪ್ರತಿ ಯೂನಿಟ್‌ಗೆ ಎರಡು ಸಾವಿರ ರೂ.ನಂತೆ ಪಿಪಿಇ ಕಿಟ್‌ಗಳನ್ನು ಖರೀದಿಸಲಾಗಿದೆ.

ಪಾರದರ್ಶಕತೆ ಕಾಯ್ದೆ ವಿನಾಯಿತಿ ಪಡೆಯದೆ ನೇರವಾಗಿ ಖರೀದಿ ಮಾಡಲಾಗಿದೆ, ಸಂಗ್ರಹಣಾ ನಿಯಮದ ಮೂಲ ಕಾರ್ಯವಿಧಾನವನ್ನು ಅನುಸರಿಸದೆ, ನೇರವಾಗಿ ಅಂದಿನ ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರ ಆದೇಶದಂತೆ ಖರೀದಿ ಮಾಡಲಾಗಿದೆ. ಇಡೀ ಪ್ರಕ್ರಿಯೆ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರ ಆಪ್ತರಾದ ಪೂರೈಕೆದಾರರಿಗೆ ಅನುಕೂಲ ಮತ್ತು ಲಾಭ ಮಾಡಿಕೊಡುವ ರೀತಿಯಲ್ಲಿ ನಡೆದಿದೆ ಎಂದು ಆಯೋಗದ ವರದಿ ತಿಳಿಸಿದೆ.

## ನ.14ರ ನಂತರ ವಕ್ಫ್ ವಿರುದ್ಧ ರಾಜ್ಯಾದ್ಯಂತ ಹೋರಾಟ

(1ನೇ ಪುಟದಿಂದ) ಶೀಘ್ರದಲ್ಲೇ ನಗರದಲ್ಲಿ ಹೋರಾಟ ನಡೆಯಲಿದೆ. ವಕ್ಫ್ ಕಾಯ್ದೆ ರದ್ದಾಗುವ ವರೆಗೂ ಹೋರಾಟ ನಿಲ್ಲುವುದಿಲ್ಲ. ಜಿಲ್ಲೆಯ ನಾಗರಿಕರು ಹೆದರಬಾರದು. ಜನರು ಕೂಡ ಹೋರಾಟದಲ್ಲಿ ಭಾಗಿಯಾಗಬೇಕು ಎಂದರು.

ಶಾಂತಿಯುತವಾಗಿದ್ದ ರಾಜ್ಯದಲ್ಲಿ ಸಿಎಂ ಭ್ರಷ್ಟಾಚಾರ ಹೆಚ್ಚಾಗಿದೆ. ವಾಲ್ಮೀಕಿ ಮತ್ತು ಮೂಡಾ ಹಗರಣದಿಂದಾಗಿ ಸಿಎಂ ಸಿದ್ದರಾಮಯ್ಯ ಶಕ್ತಿ ಕಳೆದುಕೊಂಡಿದ್ದಾರೆ. ಹಾಗಾಗಿ ಸಿ.ಎಂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಮತ್ತು ಜಮೀರ್ ಅಹಮದ್ ಅವರನ್ನೂ ಮಂತ್ರಿ ಸ್ಥಾನದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿದರು. ರಾಜ್ಯದ ರೈತರು ಹಾಗೂ ಮಠಾಧೀಶರನ್ನು ನೇರವಾಗಿ ಭೇಟಿ ಮಾಡಿ ಅಧ್ಯಯನ ಮಾಡಲಾಗಿದೆ. ಮುಂಬರುವ ಪಾರ್ಲಿಮೆಂಟ್ ಸೆಷನ್ ಒಳಗಾಗಿ ಸಮಿತಿ ವರದಿ ಮಂಡಿಸಲಾಗುವುದು ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಹಿಂದೂಗಳ ಮೇಲೆ ನಿರಂತರವಾಗಿ ತೊಂದರೆ ಆಗುತ್ತಿದೆ. ಹಿಂದೂಗಳು ಎಚ್ಚರಗೊಳ್ಳಬೇಕು. ಸುಮ್ಮನಿದ್ದರೆ ಮುಂದಿನ ದಿನಗಳಲ್ಲಿ ವಿಭೂತಿ, ಕುಂಕುಮ ಹಚ್ಚುವುದು ಕಷ್ಟವಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಭು ಕಲಬುರ್ಗಿ ಇದ್ದರು.

# ದಾವಣಗೆರೆಯಲ್ಲಿ ಮಧ್ಯಮವರ್ಗಕ್ಕೆ ಕೈಗೆಟುಕದ ನಿವೇಶನಗಳು

(1ನೇ ಪುಟದಿಂದ) ವರ್ಷಗಳಲ್ಲಿ ಅಲ್ಲಿಯೂ ನಿವೇಶನಗಳು ದುಬಾರಿಯಾಗಿದ್ದವು.

ದಕ್ಷಿಣ ಭಾಗದಲ್ಲಿ ಕೊಂಡಜ್ಜಿ ರಸ್ತೆಯ ಯರಗುಂಟೆ ಬಳಿಯ ಜಮೀನುಗಳೂ ಈಗಾಗಲೇ ಬಡಾವಣೆಗಳಾಗಿ ಮನೆಗಳು ನಿರ್ಮಾಣಗೊಂಡಿವೆ. ಸಮೀಪದ ಕಕ್ಕರಗೊಳ್ಳದಲ್ಲೂ ಬಡಾವಣೆ ನಿರ್ಮಾಣವಾಗಿ. ಈಗಾಗಲೇ ಹಲವರು ನಿವೇಶನ ಖರೀದಿಸಿದ್ದಾರೆ. ಉತ್ತರ ಭಾಗದಲ್ಲಿ ಈಗಾಗಲೇ ಶಿರಮಗೊಂಡನಹಳ್ಳಿ ಬಳಿ ಜಮೀನುಗಳ ಬೆಲೆ ಹೆಚ್ಚಾಗಿದೆ.

ಇನ್ನು ಶಾಮನೂರು ಆಚೆ ದೂಡಾದಿಂದ ನಿರ್ಮಾಣವಾಗಿದ್ದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಂತೂ ಅತಿವೇಗವಾಗಿ ಮನೆಗಳು ನಿರ್ಮಾಣವಾದವು. ಇಲ್ಲಿ ನಿವೇಶನಗಳು ಸಿಗುವುದೂ ಕಷ್ಟ ಎಂಬಂತ ಪರಿಸ್ಥಿತಿ ನಿರ್ಮಾಣವಾಗಿತ್ತು. ಶಿವಪಾರ್ವತಿ ಬಡಾವಣೆ, ಡಾಲರ್ಸ್ ಕಾಲೋನಿ ದಾಟಿ ಈಗ ಬಡಾವಣೆಗಳು ನಿರ್ಮಾಣವಾಗುತ್ತಿವೆ. ಆದರೆ ನಿವೇಶನ ಕೊಳ್ಳುವುದು ಕಷ್ಟ.

ನಗರದ ಪೂರ್ವ ಭಾಗಕ್ಕೆ ಅಷ್ಟಾಗಿ ಬೇಡಿಕೆ ಬರಲಿಲ್ಲವಾದರೂ ತೋಳಹುಣಸೆವರೆಗೂ ನಿವೇಶನಗಳಾಗಿವೆ.

ಸ್ಮಾರ್ಟ್ ಸಿಟಿ ಯೋಜನೆಯಡಿ ನಗರಕ್ಕೆ ಸಾವಿರಾರೂ ಕೋಟಿ ರೂ. ಅನುದಾನ ಇದ್ದರೂ, ನಗರದಲ್ಲಿ ಮೂತ್ರ ವಿಸರ್ಜನೆಗೂ ಜಾಗ ಹುಡುಕಾಡಬೇಕಾದ ಪರಿಸ್ಥಿತಿ ಇದೆ.

ಪಿ.ಜೆ. ಬಡಾವಣೆ, ತರಳಬಾಳು ಬಡಾವಣೆ, ವಿದ್ಯಾನಗರ, ಎಂ.ಸಿ.ಸಿ. ಎ ಹಾಗೂ ಬಿ ಬ್ಲಾಕ್ ನಂತಹ ಬಡಾವಣೆಗಳಲ್ಲೇ ಶೌಚಾಲಯಗಳಿಲ್ಲ. ಇನ್ನು ನೂತನ ಬಡಾವಣೆಗಳಲ್ಲಂತೂ ಕನಸಿನ ಮಾತೇ ಸರಿ. ಆದರೂ ನಿವೇಶನಗಳ ಬೆಲೆ ಏರಿಕೆಯಾಗಿದೆ. ಬಡವರು ಕೊಳ್ಳುವುದಾದರೂ ಹೇಗೆ ಎನ್ನುತ್ತಾರೆ ವಿದ್ಯಾನಗರದ ಹರಿಣಿ ಫ್ಯಾನ್ಸಿ ಸ್ಟೋರ್ ಮಾಲೀಕ ತರುಣ್.

### ಮನೆಗಳೂ ಹೆಚ್ಚಾಗಿವೆ..



**ಕೊಂಡ ನಿವೇಶನದಲ್ಲೀಗ ಎರಡು ಅಥವಾ ಮೂರು ಮಹಡಿ ಮನೆ ನಿರ್ಮಿಸಿ ಒಂದರಲ್ಲಿ ತಾವಿದ್ದು, ಉಳಿದ ಮನೆಗಳಿಂದ ಬಂದ ಬಾಡಿಗೆಯಲ್ಲಿ ಲೋನ್ ತೀರಿಸುವ ಆಲೋಚನೆ ಜನರದ್ದು. ಹೀಗಾಗಿ ಮನೆಗಳು ಹೆಚ್ಚಾಗಿ ಬಾಡಿಗೆ ಮನೆಗಳಿಗೆ ಬೇಡಿಕೆ ಕಡಿಮೆಯಾಗಿದೆ. ಆದರೆ ಮಧ್ಯ ಭಾಗದಲ್ಲಿ, ಪ್ರತಿಷ್ಠಿತ ಬಡಾವಣೆಗಳಲ್ಲಿ ಮಾತ್ರ ಬಾಡಿಗೆ ಮನೆಗಳಿಗೆ ಬೇಡಿಕೆ ಕುಂದಿಲ್ಲ.**

### ಕಳೆದ ವರ್ಷ 27,864 ಆಸ್ತಿ ನೋಂದಣಿ

**ನಗರದ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ 2020-21ನೇ ಸಾಲಿನಲ್ಲಿ 23,097 ಆಸ್ತಿಗಳು ನೋಂದಣಿಗಳಾಗಿದ್ದವು. ಸ್ಟಾಂಪ್ ಹಾಗೂ ರಿಜಿಸ್ಟ್ರೇಷನ್ ಶುಲ್ಕ ಸೇರಿ 70,68,93,138 ರೂ. ಸಂಗ್ರಹವಾಗಿತ್ತು. 2021-22ನೇ ಸಾಲಿನಲ್ಲಿ 25,659 ಆಸ್ತಿಗಳು ನೋಂದಣಿಯಾಗಿದ್ದು, 94,96,13,912 ರೂ. ಹಾಗೂ 2022-23ನೇ ಸಾಲಿನಲ್ಲಿ 27,864 ಆಸ್ತಿಗಳು ನೋಂದಣಿಯಾಗಿ 96,00,34,174 ರೂ. ಸಂಗ್ರಹವಾಗಿತ್ತು. ಪ್ರಸಕ್ತ ವರ್ಷದ ಏಪ್ರಿಲ್ ತಿಂಗಳಿನಿಂದ ಅಕ್ಟೋಬರ್ ಕೊನೆ ವರೆಗೆ 14,586 ಮಾತ್ರ ನೋಂದಣಿಗಳಾಗಿವೆ. ಕಳೆದ ಮೂರು ವರ್ಷಗಳಿಂದಲೂ ಏರಿಕೆಯತ್ತ ಸಾಗಿದ್ದ ನೋಂದಣಿ ಪ್ರಸಕ್ತ ವರ್ಷ ತುಸು ಇಳಿಕೆಯಾಗಿದೆ.**

### ಸೈಟ್ ಎಂಬುದು 'ಬಂಡವಾಳ'

ಪ್ರಸ್ತುತ ದಿನಗಳಲ್ಲಿ ನಿವೇಶನ ಕೊಳ್ಳುವವರಲ್ಲಿ ಹೆಚ್ಚಿನವರು ವಿವಿಧ ಇಲಾಖೆಗಳ ಸರ್ಕಾರಿ ಅಧಿಕಾರಿಗಳು, ಎ ಹಾಗೂ ಬಿ ದರ್ಜೆ ನೌಕರರು. ಪೊಲೀಸ್ ಅಧಿಕಾರಿಗಳು, ಉಪನ್ಯಾಸಕರು. ಐಟಿ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರೇ. ಮನೆಕಟ್ಟಿಸುವ ಇರಾದೆ ಇರದಿದ್ದರೂ ಭೂಮಿ ಮೇಲೆ ಬಂಡವಾಳ ಹಾಕಿದರೆ ಲಾಭವೇ ಹೆಚ್ಚು ಎನ್ನುವ ಉದ್ದೇಶ ದಿಂದ ನಿವೇಶನಗಳನ್ನು ಕೊಳ್ಳುತ್ತಿದ್ದಾರೆ. ಇನ್ನು ದಾವಣಗೆರೆಯಲ್ಲಿ ಕರ್ತವ್ಯಕ್ಕೆ ಬರುವ ಪ್ರತಿ ಸರ್ಕಾರಿ ಅಧಿಕಾರಿ ಅಥವಾ ನೌಕರ ಬೇರೆ ನಗರಕ್ಕೆ ವರ್ಗವಾದರೂ ಇಲ್ಲೊಂದು ನಿವೇಶನ ಖರೀದಿಸಿಟ್ಟು ಹೋಗುವುದೇ ಹೆಚ್ಚು ಎನ್ನುತ್ತಾರೆ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರು.

### ಮಾರ್ಗಸೂಚಿ ದರ ಏರಿಕೆಯಿಂದಲೂ ಪೆಟ್ಟು

ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಮಾರಾಟ ದರಕ್ಕೂ, ಸರ್ಕಾರ ನಿಗದಿ ಪಡಿಸಿರುವ ಮಾರ್ಗಸೂಚಿ ದರಕ್ಕೂ ಕೆಲವು ಪ್ರದೇಶಗಳಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಇದರಿಂದಾಗಿ ನಿವೇಶನ, ಜಮೀನು ಖರೀದಿ ವ್ಯವಹಾರದಲ್ಲಿ ಕಪ್ಪು ಹಣದ ಚಲಾವಣೆ ಜಾಸ್ತಿ. ಮಾರ್ಗಸೂಚಿ ದರ ಹೆಚ್ಚಿಸುವ ಮೂಲಕ ಅದಕ್ಕೂ ನಿಯಂತ್ರಣ ಹಾಕಲು ಸರ್ಕಾರ ಮುಂದಾಗಿದೆ.

ಪ್ರತಿ ವರ್ಷ ಮಾರ್ಗಸೂಚಿ ದರ ಪರಿಷ್ಕರಣೆ ಮಾಡಲಾಗುತ್ತಿತ್ತು. 2019ರಿಂದ ಕೋವಿಡ್ ಕಾರಣದಿಂದಾಗಿ ಶುಲ್ಕ ಪರಿಷ್ಕರಣೆ ಆಗಿರಲಿಲ್ಲ. ಜೊತೆಗೆ ಕಳೆಗುಂದಿದ್ದ ರಿಯಲ್ ಎಸ್ಟೇಟ್‌ಗೆ ಉತ್ತೇಜನ ನೀಡುವ ದೃಷ್ಟಿಯಿಂದ ರಾಜ್ಯ ಸರ್ಕಾರವು 2020-21ರಲ್ಲಿ ಮೊದಲ ಬಾರಿಗೆ ಶೇ. 10ರಷ್ಟು ಮಾರ್ಗಸೂಚಿ ದರವನ್ನು ಕಡಿಮೆ ಮಾಡಲಾಗಿತ್ತು.

ಮಾರ್ಗಸೂಚಿ ಪರಿಷ್ಕರಣೆಯಿಂದ ಸರ್ಕಾರದ ಆದಾಯ ಗಳಿಕೆಯಲ್ಲಿ ಹೆಚ್ಚಳವಾಗಬಹುದಾದರೂ, ಕೋವಿಡ್ ಸಂದರ್ಭದಲ್ಲಿ ಮಂದಗತಿ ಪಡೆದುಕೊಂಡಿದ್ದ ರಿಯಲ್ ಎಸ್ಟೇಟ್ ಉದ್ಯಮ ಸಾಕಷ್ಟು ಚೇತರಿಸಿಕೊಂಡಿತ್ತು. ಈಗ ದರ ಏರಿಕೆಯಿಂದ ಮತ್ತೆ ವಹಿವಾಟಿನ ಮೇಲೆ ಹೊಡೆತ ಬಿದ್ದಿದೆ.


**ಕಣ್ಣಿನ ಉಚಿತ ತಪಾಸಣೆ**

**ಡಾ।। ಕಾಕಡೆ, ಕಣ್ಣಿನ ತಜ್ಞರು**

ಪ್ರತಿ ಸೋಮವಾರ ಮಾತ್ರ ಬೆಳಿಗ್ಗೆ 11 ರಿಂದ 1 ಗಂಟೆಯವರೆಗೆ



**• ಸೌತ್ ಇಂಡಿಯಾ ಆಪ್ಟಿಕಲ್ಸ್**
ಬ್ಯಾಂಕ್ ಆಫ್ ಬರೋಡಾ ಹತ್ತಿರ, ರಾಂ ಅಂಡ್ ಕೋ ಸರ್ಕಲ್,
ಪಿ.ಜೆ. ಬಡಾವಣೆ, ದಾವಣಗೆರೆ

ಉಚಿತ ತಪಾಸಣೆ ಮತ್ತು ನೋಂದಣಿಗಾಗಿ ಕರೆ ಮಾಡಿ. : 08192 231432

**WALK IN INTERVIEW**

Jnana Vikas English Medium Higher Primery School
NH-4, Honnur Gollarahatti, Davangere Tq & Dist

**Walk In Interview for Head Master**
Eligibility : BSc., B.Ed., or BA., B.Ed.,
Experience will be prefered (Minimum 5 years)
Walk in Interview : Time : 12 to 4, Date : 11.11.2024

Place : Jnana Vikas English Medium Higher Primery School
NH-4 Honnur Gollarahatti, Davangere (Dist)
Contact : 8147222753, 98807 27515

**ಕಂಪನಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**

**BANSAL ARADHYA STEEL PVT LTD**
Haluvarthy near Anagodu,
Davangere - 577 556.

**SSLC, PUC, ITI-any Trade, BSc.,**
ವಯಸ್ಸು : 19 ರಿಂದ 35ರ ಒಳಗೆ

ನೇರ ಸಂದರ್ಶನದ ಸಮಯ : ಬೆಳಗ್ಗೆ 10.00 ರಿಂದ 4.00

## ಶಿಗ್ಗಾಂವಿ ಉಪಚುನಾವಣೆಯಲ್ಲಿ ಜಿ.ಎಂ. ಸಿದ್ದೇಶ್ವರ ಪ್ರಚಾರ



ಶಿಗ್ಗಾಂವಿ, ನ.9- ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ ಬಿ.ಜೆ.ಪಿ ಮತ್ತು ಜೆ.ಡಿ.ಎಸ್. ಮೈತ್ರಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರವಾಗಿ ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ ಅವರು ಅತ್ತಿಗೆರೆ ಮತ್ತು ಶಿಶುನಾಳ ಗ್ರಾಮಗಳಲ್ಲಿ ಇಂದು ಮತ ಯಾಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈಗಿನ ಕಾಂಗ್ರೆಸ್ ಸರ್ಕಾರದ ಸಿಎಂ ರವರೇ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಇಂತಹ ಭ್ರಷ್ಟಾಚಾರದ ಸರ್ಕಾರ ಹೆಚ್ಚು ದಿನ ಉಳಿಯುವುದಿಲ್ಲ ಎಂದು ಹೇಳಿ ಹಾಗೂ ಕ್ಷೇತ್ರದ ಅಭಿವೃದ್ಧಿಗಾಗಿ ಭರತ್ ಬೊಮ್ಮಾಯಿಯನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವಂತೆ ಕ್ಷೇತ್ರದ ಮನವಿ ಮಾಡಿದರು.

ಈ ವೇಳೆ ಮಾಜಿ ಸಚಿವ ಮುರುಗೇಶ್ ಆರ್. ನಿರಾಣಿ, ಮಾಜಿ ಜಿಲ್ಲಾಧ್ಯಕ್ಷರುಗಳಾದ ಯಶವಂತರಾವ್ ಜಾಧವ್, ವೀರೇಶ್ ಹನಗವಾಡಿ, ಮಾಜಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಲ್ಲಾ ಮಾಜಿ ಪ್ರಧಾನ ಕಾರ್ಯದರ್ಶಿ ಜಗದೀಶ್ ಬಿ.ಎಸ್., ಮುಖಂಡರುಗಳಾದ ಮಹೇಶ್. ಎಮ್. ಆರ್., ಚನ್ನಪ್ಪ, ಜಗದೀಶ್, ಚನ್ನೇಶ್, ಪ್ರಭು, ಶಿವನಗೌಡ ಪಾಟೀಲ್, ಸುರೇಶ್‌ರಾವ್ ಶಿಂಧೆ, ಹನುಮಂತರಾವ್ ಸುರ್ವೆ, ಬಾಲಚಂದ್ರ ಹಾಗೂ ಮುಖಂಡರು ಉಪಸ್ಥಿತರಿದ್ದರು.

## ನಿಯಮಿತ ವ್ಯಾಯಾಮ, ಪೌಷ್ಟಿಕ ಆಹಾರ ಸೇವನೆ ಉತ್ತಮ ಆರೋಗ್ಯಕ್ಕೆ ಸೋಪಾನ: ಡಾ.ಕಡಬಗೆರೆ

ದಾವಣಗೆರೆ, ನ.9- ಪ್ರತಿಯೊಬ್ಬ ವ್ಯಕ್ತಿಗೂ ಆರೋಗ್ಯವೇ ಭಾಗ್ಯ. ನಿಯಮಿತ ವ್ಯಾಯಾಮ, ದುರಭ್ಯಾಸಗಳಿಂದ ದೂರವಿರುವ ಮೂಲಕ ಆರೋಗ್ಯಕರ ಜೀವನ ಶೈಲಿಯಿಂದ ಮಾನಸಿಕ ಹಾಗೂ ದೈಹಿಕವಾಗಿ ಸದೃಢವಾಗಿರಲು ಸಾಧ್ಯವಿದೆ ಎಂದು ಬಾಪೂಜಿ ಆಸ್ಪತ್ರೆ ಡಿಎಂಓ ಡಾ. ಶಿವನಗೌಡ ಕಡಬಗೆರೆ ಹೇಳಿದರು.



ನಗರದ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿ ಇಂದು ಸಂಜೆ ಹಮ್ಮಿಕೊಂಡಿದ್ದ 310 ನೇ ಶಿವಗೋಷ್ಠಿ ಹಾಗೂ 86 ನೇ ಸ್ಮರಣೆ ಕಾರ್ಯಕ್ರಮದಲ್ಲಿ 'ಆರೋಗ್ಯವೇ ಭಾಗ್ಯ' ಕುರಿತು ಅವರು ಮಾತನಾಡಿದರು.

ಮನುಷ್ಯ ಉತ್ತಮ ರೀತಿಯಲ್ಲಿ ಜೀವನ ನಡೆಸಲು ಸದೃಢ ಆರೋಗ್ಯ ಅತ್ಯಗತ್ಯ. ನಿಯಮಿತ ವ್ಯಾಯಾಮ, ಹೆಚ್ಚು ನೀರು ಕುಡಿಯುವುದು, ದುಶ್ಚಟಗಳಿಂದ ದೂರ ಇರುವುದು. ಸೊಪ್ಪು, ಹಸಿ ತರಕಾರಿ, ಹಣ್ಣುಗಳು ಸೇರಿದಂತೆ ಪೌಷ್ಟಿಕಾಂಶವುಳ್ಳ ಆಹಾರ ಸೇವನೆ ಮಾಡಬೇಕೆಂದು ಸಲಹೆ ನೀಡಿದರು.

ದೈಹಿಕ, ಮಾನಸಿಕ, ಭಾವನಾತ್ಮಕ ಮತ್ತು ಸಾಮಾಜಿಕ ಯೋಗ ಕ್ಷೇಮದ ಸ್ಥಿತಿಯನ್ನು ಆರೋಗ್ಯ ಎಂದು ಕರೆಯಲಾಗುತ್ತದೆ. ಒತ್ತಡ, ಚಿಂತೆ ಮತ್ತು ಉದ್ವೇಗ ಮನುಷ್ಯನ ಅನಾರೋಗ್ಯಕ್ಕೆ ಪ್ರಮುಖ ಕಾರಣಗಳು. ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಜೊತೆಗೆ ಕ್ರಿಯಾಶೀಲತೆ ರೂಢಿಸಿಕೊಂಡರೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.

ನಿವೃತ್ತ ಪ್ರಾಚಾರ್ಯ ಡಾ. ಪಿ. ಬಸವಕುಮಾರಯ್ಯ ಅವರು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಅನನ್ಯವಾದುದು. ಸರಳ, ಸಜ್ಜನಿಕೆಯುಳ್ಳ ಅವರು ನಿಸ್ವಾರ್ಥ ಸೇವೆ ಸಲ್ಲಿಸುವ ಮೂಲಕ ಅನೇಕ ಶಿಷ್ಯರನ್ನು ಸಮಾಜಕ್ಕೆ ಕೊಡುಗೆಯಾಗಿ ಕೊಟ್ಟಿದ್ದಾರೆಂದು ಸ್ಮರಿಸಿದರು.

ನಿವೃತ್ತ ಪ್ರಾಧ್ಯಾಪಕ ಉಜ್ಜಿನಯ್ಯ ಅವರು ಡಾ.ಬಸವಕುಮಾರಯ್ಯ ಅವರನ್ನು ಸ್ಮರಣೆ ಮಾಡುವ ಮೂಲಕ ಅವರ ಹುಟ್ಟು, ಬೆಳವಣಿಗೆ, ಸಾಧನೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಅಮೋಘ ಸೇವೆಯನ್ನು ಕೊಂಡಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಗನೂರು ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ್ರು ಮಾತನಾಡಿ, ನಾವು ಶಿಕ್ಷಣ ಸಂಸ್ಥೆ ಆರಂಭಿಸಲು ಡಾ.ಪಿ. ಬಸವಕುಮಾರಯ್ಯ ಕೂಡ ಕಾರಣರು. ಅವರ ಸಲಹೆ, ಸಹಕಾರದಿಂದ ಸಂಸ್ಥೆ ಬೃಹದಾಕಾರವಾಗಿ ಬೆಳೆಯುತ್ತಿದೆ ಎಂದರು.

ಕೇವಲ ವಯಸ್ಸಾದವರಿಗೆ ನಾವು ಆರೋಗ್ಯ, ಧಾರ್ಮಿಕ , ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುವಂತೆ ಮಾಡಬೇಕಾದ ಅನಿವಾರ್ಯತೆ ಇದೆ. ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬಿತ್ತುವ ಕೆಲಸ ಮಾಡಬೇಕಾದುದು ಪ್ರತಿಯೊಬ್ಬ ಪೋಷಕರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ದಿ. ಡಾ. ಪಿ.ಬಸವಕುಮಾರಯ್ಯ ಅವರ ಪುತ್ರಿ ನಮ್ರತಾ ಉಪಸ್ಥಿತರಿದ್ದರು. ಕದಳಿ ಮಹಿಳಾ ವೇದಿಕೆ ಸದಸ್ಯರು ವಚನ ಗೀತೆ ಹಾಡಿದರು. ಕೃಷ್ಣಮೂರ್ತಿ ಸ್ವಾಗತಿಸಿದರು. ಸಿದ್ಧಪ್ಪ ವಂದಿಸಿದರು.

## ಸೇಂಟ್ ಜಾನ್ಸ್ ವಿದ್ಯಾ ಸಂಸ್ಥೆಯಲ್ಲಿ ರಾಜ್ಯೋತ್ಸವ



ದಾವಣಗೆರೆ, ನ. 9- ನಗರದ ಸೇಂಟ್‌ಜಾನ್ಸ್ ವಿದ್ಯಾಸಂಸ್ಥೆಯಲ್ಲಿ 69ನೇ ಕನ್ನಡ ರಾಜ್ಯೋತ್ಸವವನ್ನು ಶಾಲಾ ಆವರಣದಲ್ಲಿ ಆಚರಿಸಲಾಯಿತು.

ಕನ್ನಡ ಅಧ್ಯಯನ ಕೇಂದ್ರದ ಸಹ ಪ್ರಾಧ್ಯಾಪಕ ಡಾ. ಜಯರಾಮಯ್ಯ ವಿಶೇಷ ಅತಿಥಿಗಳಾಗಿ ಆಗಮಿಸಿ ಮಾತನಾಡಿ, ಭಾರತಕ್ಕೆ ವಾಸ್ತು ಶಿಲ್ಪಕಲೆಯನ್ನು ಕಲಿಸಿಕೊಟ್ಟವರೇ ಕನ್ನಡಿಗರು. ಬಹು ಸಂಸ್ಕೃತಿಯ ರಾಜ್ಯ ನಮ್ಮದು. ಎಲ್ಲರೂ ಕನ್ನಡವನ್ನೇ ಮಾತನಾಡಿ, ಕನ್ನಡವನ್ನು ಉಳಿಸಿ ಎಂದು ಪುಟ್ಟ ಕಥೆಯ ಮೂಲಕ ನಾವು ಕಚ್ಚುವ ಹಾವಾಗಬಾರದು, ಬುಸುಗುಡುವ ಹಾವಾಗಬೇಕು ಎಂದು ಮಕ್ಕಳಿಗೆ ಸಂದೇಶ ನೀಡಿದರು.

ಅಪ್ಪಟ ಕನ್ನಡತಿ ಅಪರ್ಣ ಹಾಗೂ ಸಾಹಿತಿ ಡಾ. ಕಮಲಾ ಹಂಪನಾ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತಾ, ಪುಷ್ಪ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್‌ಕುಮಾರ್ ಉಪಸ್ಥಿತರಿದ್ದರು. ವಿದ್ಯಾಸಂಸ್ಥೆಯ ಕಾರ್ಯದರ್ಶಿ ಟಿ.ಎಂ. ಉಮಾಪಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಖಜಾಂಚಿ ಪ್ರವೀಣ್ ಹುಲ್ಲುಮನೆ, ಸೈಯದ್ ಆರಿಫ್ ಆರ್., ಶ್ರೀಮತಿ ಪ್ರೀತಾ ಟಿ. ರೈ, ಶ್ರೀಮತಿ ಎಸ್.ಎಂ. ನೇತ್ರಾವತಿ ಮತ್ತಿತರರು ಉಪಸ್ಥಿತರಿದ್ದರು.

## ಬಿ. ವೀರಣ್ಣ ಕಾನೂನು ಬದ್ಧ ನಾಯಕ ಸಮಾಜದ ಜಿಲ್ಲಾಧ್ಯಕ್ಷರಲ್ಲ

ದಾವಣಗೆರೆ, ನ.9- ಜಿಲ್ಲೆಯಲ್ಲಿ ನಾಯಕ ಸಮಾಜದ ಸಮಿತಿ ರಚನೆಯಾಗಿಲ್ಲ. ಈ ಸಮಾಜಕ್ಕೆ ಜಿಲ್ಲೆಯಲ್ಲಿ ಯಾವ ಅಧ್ಯಕ್ಷರೂ ಇಲ್ಲ. ಹಾಗಾಗಿ ಬಿ. ವೀರಣ್ಣ ಕಾನೂನು ಬದ್ಧ ನಾಯಕ ಸಮಾಜದ ಜಿಲ್ಲಾಧ್ಯಕ್ಷರಲ್ಲ ಎಂದು ವಕೀಲ ಗುಮ್ಮನೂರು ಕೆ.ಎಂ. ಮಲ್ಲಿಕಾರ್ಜುನ್ ಆರೋಪಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲಾ ತಾಲ್ಲೂಕಿನ ನಾಯಕ ಸಮಾಜದ ಸದಸ್ಯರನ್ನೊಳಗೊಂಡ ಕಮಿಟಿಯಲ್ಲಿ ನಿರ್ದೇಶಕರನ್ನು ಒಳಗೊಂಡಂತೆ ಜಿಲ್ಲಾಧ್ಯಕ್ಷರ ಆಯ್ಕೆಯಾಗಬೇಕು. ಆದರೆ ಬಿ. ವೀರಣ್ಣ ಈ ರೀತಿ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿಲ್ಲ. ಇವರು ಸ್ವಯಂ ಘೋಷಿತ ಅಧ್ಯಕ್ಷರಾಗಿದ್ದಾರೆ ಎಂದು ದೂರಿದರು.

ಬಿ. ವೀರಣ್ಣ ನಿಜವಾಗಲೂ ನಾಯಕ ಸಮಾಜದ ಜಿಲ್ಲಾಧ್ಯಕ್ಷರಾಗಿದ್ದರೆ, ಸೂಕ್ತ ದಾಖಲೆಗಳನ್ನು ಬಹಿರಂಗಪಡಿಸಲಿ ಎಂದು ಅವರು ಒತ್ತಾಯಿಸಿದರು.

## ಶ್ರೀ ಸಚ್ಚಿದಾನಂದ ಶಂಕರ ಭಾರತಿ ಮಹಾಸ್ವಾಮಿಗಳ ಆರಾಧನೆ



ದಾವಣಗೆರೆ, ನ.9- ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಕೂಡಲಿ ಶೃಂಗೇರಿ ಶಂಕರ ಮಠದ ಮಹಡಿಯ ಸಭಾಂಗಣದಲ್ಲಿ ಇಂದು ಶ್ರೀ ಕೂಡಲಿ ಶೃಂಗೇರಿ ಶ್ರೀ ಸಚ್ಚಿದಾನಂದ ಶಂಕರ ಭಾರತೀ ಮಹಾಸ್ವಾಮಿಗಳವರ 54ನೇ ಆರಾಧನಾ ಮಹೋತ್ಸವವು ವೇದೋಕ್ತ ಹಾಗೂ ಶಾಸ್ತ್ರೋಕ್ತವಾಗಿ ನೆರವೇರಿತು. ಕೃಷ್ಣಮೂರ್ತಿಯವರ ಮುಂದಾಳತ್ವದಲ್ಲಿ ಧಾರ್ಮಿಕ ಅಧ್ಯಾತ್ಮಿಕ ವಿಧಿ ವಿಧಾನಗಳು ನೆರವೇರಿದವು.

## ಕೊಟ್ಟೂರು : ನೂರುಲ್ಲಾ ಖಾನ್ ನಿವೃತ್ತಿ



ಕೊಟ್ಟೂರು, ನ.9- ನಗರದ ಶಾದಿಮಹಲ್‌ನಲ್ಲಿ ಮುಖ್ಯಾಧಿಕಾರಿಯಾಗಿ ನಿವೃತ್ತಿಯಾದ ಎಂ.ಎ. ನೂರುಲ್ಲಾ ಖಾನ್ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಹೊಸಪೇಟೆ ಶಾಸಕ ಹೆಚ್. ಆರ್. ಗವಿಯಪ್ಪ ಭಾಗವಹಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷ ದೊಡ್ಡರಾಮಣ್ಣ, ಸಾವಜ್ಜಿ ರಾಜಣ್ಣ, ಬದ್ದಿ ಮರಿಸ್ವಾಮಿ, ಪಟ್ಟಣ ಪಂಚಾಯತ್ ಅಧ್ಯಕ್ಷೆ ಬಿ. ರೇಖಾ, ಉಪಾಧ್ಯಕ್ಷ ಜಿ. ಸಿದ್ದಯ್ಯ, ಟಿ. ಹನುಮಂತಪ್ಪ ವಕೀಲರು, ಮುಂತಾದವರು ಭಾಗವಹಿಸಿದ್ದರು.

## ಆಭರಣ ಮೇಳ ಉದ್ಘಾಟಿಸಿದ ನಟಿ ಆರಾಧನಾ



ದಾವಣಗೆರೆ, ನ.9- ನಗರದ ಎಸ್.ಎಸ್. ಕನ್ವೆನ್ಷನ್ ಹಾಲ್‌ನಲ್ಲಿ ಆರಂಭವಾಗಿರುವ 3 ದಿನಗಳ ವಿನೂತನ ಆಭರಣಗಳ ವಸ್ತು ಪ್ರದರ್ಶನವನ್ನು ಚಿತ್ರನಟಿ ಆರಾಧನಾ ಉದ್ಘಾಟಿಸಿದರು. ಪ್ರದರ್ಶನ ವೀಕ್ಷಿಸಿದ ಅವರು ವ್ಯವಸ್ಥಾಪಕರಿಗೆ ಶುಭ ಕೋರಿದರು. ಮೇಳವನ್ನು ಆಯೋಜಿಸಿರುವ ಗೋಲ್ಡನ್ ಕ್ರೀಪರ್ ಸಂಸ್ಥೆಯ ಜಗದೀಶ್ ಮತ್ತು ಹೇಮಲತಾ ಜಗದೀಶ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

## ನಿಟ್ಟೂರಿನಲ್ಲಿ ಇಂದು ಆರೋಗ್ಯ ಮೇಳ

ಮಲೇಬೆನ್ನೂರು ಸಮೀಪದ ನಿಟ್ಟೂರು ಗ್ರಾಮದ ಸರ್ಕಾರಿ ಪ್ರೌಢಶಾಲೆ ಆರವಣದಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆವರೆಗೆ ನಿಟ್ಟೂರಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ನಿಟ್ಟೂರು ತರಳಬಾಳು ಅಮೃತ ತೋಟಗಾರಿಕೆ ರೈತ ಉತ್ಪಾದಕ ಕಂಪನಿ ಮತ್ತು ಮಲೇಬೆನ್ನೂರು ಲಯನ್ಸ್ ಕ್ಲಬ್ ಸಹಯೋಗದೊಂದಿಗೆ ಮಂಗಳೂರಿನ ಶ್ರೀನಿವಾಸ್ ಆಸ್ಪತ್ರೆ ವತಿಯಿಂದ ನುರಿತ ವೈದ್ಯರ ತಂಡದಿಂದ ಬೃಹತ್ ಉಚಿತ ಆರೋಗ್ಯ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಲಯನ್ಸ್ ಕ್ಲಬ್ ಅಧ್ಯಕ್ಷೆ ಶ್ರೀಮತಿ ಪಾರ್ವತಮ್ಮ ಇ.ಎಂ. ಮರುಳಸಿದ್ದೇಶ್ ತಿಳಿಸಿದ್ದಾರೆ.

## ಹಿರೇಮೇಗಳಗೇರಿ ಗ್ರಾಮದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರ ಆರಂಭ

ಹರಪನಹಳ್ಳಿ, ನ.9- ಹರಪನಹಳ್ಳಿ ತಾಲ್ಲೂಕು ಹಿರೇಮೇಗಳಗೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರ ಆರಂಭಿಸಲಾಯಿತು.

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉಚಿತವಾಗಿ ಕಂಪ್ಯೂಟರ್ ತರಬೇತಿ ನೀಡುವ ಉದ್ದೇಶದಿಂದ ರಾಜ್ಯ ಸ್ವಯಂ ಸೇವಾ ಸಂಸ್ಥೆ ಹಾಗೂ ಬೆಂಗಳೂರು ಸುಮಂಗಲಿ ಸೇವಾ ಆಶ್ರಯ ಸಂಸ್ಥೆ ಸಹಯೋಗದಲ್ಲಿ , ಜನ ಸೇವಾ ಸಮೃದ್ಧಿ ಟ್ರಸ್ಟ್‌ನಿಂದ ಈ ಕೇಂದ್ರವನ್ನು ಆರಂಭಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಸಿದ್ದಾರ್ಥ ಎ.ಎಸ್ ತಿಳಿಸಿದರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ರಂಗಪ್ಪ ಆರ್., ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪ್ರತಿಭಾ ಪರಶುರಾಮಪ್ಪ ಕೆ, ಮುಖಂಡರಾದ ಬಣಕಾರ್ ಮಂಜಪ್ಪ, ದೊಡ್ಡಜ್ಜರ ಹನುಮಂತಪ್ಪ, ಬೇಲೂರು ಶಂಕ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.



## ಮಾದಾರ ಚನ್ನಯ್ಯ ಜಯಂತ್ಯುತ್ಸವ : ನಗರದಲ್ಲಿ ಇಂದು ಪೂರ್ವಭಾವಿ ಸಭೆ

ಗಾಂಧಿನಗರದ ಶ್ರೀ ಗುರು ರಾಮದಾಸ್ ಸ್ವಾಮಿ ಅಧ್ಯಾತ್ಮಿಕ ಟ್ರಸ್ಟ್ ಹಾಗೂ ಜಿಲ್ಲಾ ಮಾದಿಗ ಸಮಾಜದ ಮುಖಂಡರ ನೇತೃತ್ವದಲ್ಲಿ ಹಮ್ಮಿಕೊಂಡಿರುವ 33 ನೇ ವರ್ಷದ ಸಾಮೂಹಿಕ ಕಲ್ಯಾಣ ಮಹೋತ್ಸವ, ಮಾದಾರ ಚನ್ನಯ್ಯ ಜಯಂತ್ಯುತ್ಸವ, ಜಿಲ್ಲಾ ಮಾದಿಗರ ಹಾಗೂ ಪರಿಶಿಷ್ಟ ಜಾತಿಯವರ ಸಮಾವೇಶದ ಪೂರ್ವಭಾವಿ ಸಭೆಯನ್ನು ಇಂದು ಬೆಳಿಗ್ಗೆ 10.30 ಕ್ಕೆ ಶಿವಯೋಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಕೆ.ಎಸ್.ಬಸವಂತಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಮಾಜದ ಮುಖಂಡರಾದ ಬಿ.ಹೆಚ್. ವೀರಭದ್ರಪ್ಪ, ಎಲ್. ಎಂ. ಹನುಮಂತಪ್ಪ ತಿಳಿಸಿದ್ದಾರೆ.

## ವೀರಪ್ಪ ಭಾವಿ ನಿಧನಕ್ಕೆ ಬಸವರಾಜ ಗುರೂಜಿ ಸಂತಾಪ

ದಾವಣಗೆರೆ, ನ.9- ಇಂದಿನ ಸುದ್ದಿ ಸಂಪಾದಕ ವೀರಪ್ಪ ಎಂ. ಬಾವಿ ಅವರ ನಿಧನಕ್ಕೆ ಶ್ರೀ ಬಸವರಾಜ ಗುರೂಜಿಯವರು ಶೋಕ ವ್ಯಕ್ತಪಡಿಸಿದ್ದು, ವೀರಪ್ಪ ಭಾವಿ ಅವರ ನಿವಾಸಕ್ಕೆ ಭೇಟಿ ನೀಡಿ, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಗುರೂಜಿ ಜೊತೆಗೆ ಭಕ್ತರಾದ ಸಂಗಪ್ಪ ತೋಟದ ಶಾಮನೂರು, ಬಿ. ಸಂತೋಷ್‌ಕುಮಾರ್, ಮಹಾದೇವಮ್ಮ ಮಲ್ಲಿಕಾರ್ಜುನಪ್ಪ ಬಸವ ಕೇಂದ್ರ, ಪ್ರಕಾಶ್ ಹೊಸಮನಿ ಶಾಮನೂರು, ಅರುಣೋದಯ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷೆ ಸುಧಾ, ಕವಿತ ನಾಗರಾಜ್ ಇನ್ನಿತರರು ಇದ್ದರು.


## ವರ್ಗಾವಣೆ ದಂಧೆ : ನೌಕರರ ಹೊಡೆದಾಟ

ಬೆಂಗಳೂರು, ನ. 9- ವರ್ಗಾವಣೆ ದಂಧೆ ವಿಚಾರಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಸಚಿವರೊಬ್ಬರ ಜೊತೆ ಕೆಲವರು ಹೊಡೆದಾಡಿಕೊಂಡಿರುವ ಮಾಹಿತಿ ಇದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಚನ್ನಪಟ್ಟಣ ಉಪಚುನಾವಣಾ ಪ್ರಚಾರ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರ್ಗಾವಣೆ ದಂಧೆ ಹಣ ಹಂಚಿಕೆ ವಿಚಾರದಲ್ಲಿ ಈ ಕಿತ್ತಾಟ ನಡೆದಿದೆ ಎಂಬ ಮಾಹಿತಿ ಇದೆ. ಒಬ್ಬ ಮಂತ್ರಿಯನ್ನು ಹಣ ಹಂಚಿಕೆ ವಿಚಾರದಲ್ಲಿ ಬಹಿರಂಗವಾಗಿ ತರಾಟೆಗೆ ತಗೆದುಕೊಳ್ಳುತ್ತಾರೆ ಎಂದರೆ, ರಾಜ್ಯ ಯಾವ ಹಂತಕ್ಕೆ ತಲುಪಿದೆ ಎಂಬುದನ್ನು ಜನತೆ ಗಮನಿಸಬೇಕು ಎಂದರು.

## ಸೂರಿಗಾಗಿ ಪರಿತಪಿಸುವ ಕಲಾವಿದರ ಕುಟುಂಬ

### ಬಡತನದ ಬೇಗೆಯಲ್ಲೂ ಅರಳಿದ ಪ್ರತಿಭೆ ; ಚಿನ್ನಸಮುದ್ರ ಉಮಾನಾಯ್ಕಗೆ ಸುವರ್ಣ ಕರ್ನಾಟಕ ಪುರಸ್ಕಾರ







**ಜಿ.ಜಗದೀಶ್, ಮಾಯಕೊಂಡ**

ಸೋರುವ ಸೂರು, ಬೀಳುವಂತಿರುವ ಗೋಡೆ, ಮನೆ ಮುಂದೆಲ್ಲ ತಗಡು, ಗರಿಯ ತೇಪೆ, ಮುರುಕು ಮಂಚದ ತುಂಬಾ ಹರಡಿದ ನೂರಾರು ಪ್ರಶಸ್ತಿ ಪತ್ರಗಳು, ಹಳೇ ಚೀಲಗಳಲ್ಲಿ ಗೋಡೆ ಮೊಳೆಗೆ ಇಳಿಬಿದ್ದು ಇಣುಕುವ ಹಾರ, ನೆನಪಿನ ಕಾಣಿಕೆಗಳು... ಹೀಗೆ ಬಡತನವೇ ಮೈದಳೆದಂತೆ ಕಾಣುತ್ತಿರುವ ಈ ಮನೆಯಲ್ಲಿನ ಕಲಾ ಸರಸ್ವತಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಅರಸಿ ಬಂದಿದೆ.' ಪ್ರತಿಭೆ ಹುಟ್ಟುವುದು ಅರಮನೆಯಲ್ಲಲ್ಲ; ಗುಡಿಸಲಲ್ಲಿ' ಎಂಬುದನ್ನು ಒಪ್ಪಿಸುವಂತಿದೆ.

ತಾಲ್ಲೂಕಿನ ಚಿನ್ನಸಮುದ್ರ ಗ್ರಾಮದ 76ರ ಇಳಿವಯಸ್ಸಿನ ಉಮಾ ನಾಯ್ಕ ಕೈಯಲ್ಲಿ ರಾಜಸ್ಥಾನಿ ತಂಬೂರಿ (ಸಾರಂಗಿ) ಹಿಡಿದು ತಂತಿ ಮೀಟುತ್ತಾ ಹಾಡಿದರೆ ಎಂಥವರೂ ಮಂತ್ರ ಮುಗ್ಧರಾಗುತ್ತಾರೆ ಮಾತ್ರವಲ್ಲ, ಇಂಥ ಅಪರೂಪದ ಪ್ರತಿಭೆಗೆ ಒಂದು ಸೂರು ಕಲ್ಪಿಸಲಾರದ ಸರ್ಕಾರವನ್ನೂ ಶಪಿಸುತ್ತಾರೆ.

**ಕೂಲಿಯೇ ಬದುಕಿಗಾಧಾರ :**

ಕಿತ್ತು ತಿನ್ನುವ ಬಡತನ ನೀಗಲು ಕೂಲಿನಾಲಿ ಮಾಡಿ, ಕುರಿಕಾದು ಬದುಕಿನ ಬಂಡಿ ಸಾಗಿಸಿದರೂ ಉಮಾನಾಯ್ಕ ಕುಟುಂಬ ಕಲೆಯ ಆರಾಧನೆಯಿಂದ ಹಿಂದೆ ಸರಿದಿಲ್ಲ.

ಉಮಾನಾಯ್ಕ ಅವರ ತಂದೆ ರಾಮಾನಾಯ್ಕ, ಉಮಾನಾಯ್ಕ ಅವರ ಅಜ್ಜ ಸಬ್ಯಾನಾಯ್ಕ ಕೂಡಾ ರಾಜಸ್ಥಾನಿ ತಂಬೂರಿ ವಾದನ ಮತ್ತು ಗಾಯನಕ್ಕೆ ಹೆಸರಾಗಿದ್ದರು.

ಕುಟುಂಬದ ನಾಲ್ಕನೇ ತಲೆಮಾರಿನ ಉಮಾನಾಯ್ಕ ಅವರ ಮಗ ರುದ್ರೇಶ್ ನಾಯ್ಕ ಕೂಡಾ ಜಾನಪದ ಗಾಯಕರಾಗಿದ್ದಾರೆ. ವಂಶವಾಹಿ ಕಲಾಸೇವೆ ಮಾಡಿಕೊಂಡೇ ಬಂದಿರುವ ಕುಟುಂಬ ಇಂದಿಗೂ ಪರಂಪರೆ ಮುಂದುವರಿಸಿಕೊಂಡು ಬಂದಿದೆ.

ಚಿನ್ನಸಮುದ್ರದಂಥ ಕುಗ್ರಾಮದಲ್ಲಿ ಅರಳಿದ ಪ್ರತಿಭೆಯನ್ನು ಹಲವು ಸಂಘ -ಸಂಸ್ಥೆಗಳು ಗುರುತಿಸಿ ಗೌರವಿಸಿವೆ. ಕರ್ನಾಟಕದ ಸುವರ್ಣ ಮಹೋತ್ಸವ ನಿಮಿತ್ತ ರಾಜ್ಯ ಸರ್ಕಾರ ಐವತ್ತು ಕಲಾವಿದರು ಮತ್ತು ಐವತ್ತು ಕಲಾವಿದೆಯರಿಗೆ ಸುವರ್ಣ ಕರ್ನಾಟಕ ಪ್ರಶಸ್ತಿ ನೀಡಿದ್ದು, ಅದರಲ್ಲಿ ಚಿನ್ನಸಮುದ್ರದ ಉಮಾನಾಯ್ಕ ಆಯ್ಕೆಯಾಗಿದ್ದಾರೆ. ರಾಜ್ಯ ಪ್ರಶಸ್ತಿ ಅವರನ್ನು ಹುಡುಕಿ ಬಂದಿರುವುದು ಗ್ರಾಮಸ್ಥರಲ್ಲಿ ಸಂತೋಷ ತಂದಿದೆ. ಕೊನೆ ಕೊನೆಗಾದರೂ ಸರ್ಕಾರ ಇಂತಹ ಅಪರೂಪದ ಕಲಾವಿದರನ್ನು ಗುರುತಿಸಿದೆ ಎಂದು ಸಂಭ್ರಮಿಸಿದ್ದಾರೆ.

ಇವರ ಕುಟುಂಬ ವಾಸಿಸುವ ಮನೆ ಹಾಳಾಗಿ, ಬೀಳುವಂತಿದೆ. ಇವರ ಕಲಾ ಸೇವೆಯ ಪ್ರಶಸ್ತಿ, ದಾಖಲೆ ಇಡಲೂ ಮನೆಯಲ್ಲಿ ಜಾಗವಿಲ್ಲ. ಎಷ್ಟೋ ದಾಖಲೆ ನೆನೆದೇ ಹಾಳಾಗಿವೆ. ಸರ್ಕಾರ ಇವರಿಗೆ ಕೂಡಲೇ ಮನೆ ಮಂಜೂರು ಮಾಡಬೇಕು ಎನ್ನುತ್ತಾರೆ ಗ್ರಾಮಸ್ಥರು.

ನಮ್ಮ ಹಿರೀಕರ ಕಾಲದಿಂದ ರಾಜಸ್ತಾನಿ ತಂಬೂರಿಯೊಂದಿಗೆ ಮದುವೆ, ಮುಂಜಿಗಳಲ್ಲಿ ಪದ ಹಾಡಿ, ಭಿಕ್ಷಾಟನೆ ಮಾಡಿ ಚಿಕ್ಕಾಸು, ಕಾಳು ಪಡೆಯುತ್ತಿದ್ದರು.

ನಮ್ಮ ತಂದೆ ಭಿಕ್ಷಾಟನೆ ಮಾಡಲ್ಲ ಕಾರ್ಯಕ್ರಮಗಳಲ್ಲಿ ಹಾಡ್ತೀನಿ ಕೂಲಿನಾಲಿ ಮಾಡಿ ಕುರಿಕಾದು ಬದುಕುತ್ತಿದ್ದೇನೆ. ಅರ್ಧ ಎಕರೆಯಷ್ಟು ಕಲ್ಲು ಜಮೀನು ಬಿಟ್ಟರೆ ಬೇರೇನೂ ಇಲ್ಲ. ಮನೆ ಮಂಜೂರು ಮಾಡಲು ಅರ್ಜಿ ಹಾಕಿದರೂ ಪ್ರಯೋಜನವಾಗಿಲ್ಲ, ಎಂದು ಪೀರಿಬಾಯಿ ಬದುಕಿನ ಹಾದಿ ಬಿಚ್ಚಿಟ್ಟರು.

**ಉಮಾನಾಯ್ಕ ತಂದೆ, ಪತ್ನಿಗೂ ಪ್ರಶಸ್ತಿ :**

ಉಮಾನಾಯ್ಕ ಅವರ ತಂದೆ ತಂಬೂರಿ ರಾಮಾನಾಯ್ಕ ಕೂಡಾ ರಾಜ್ಯ ಪ್ರಶಸ್ತಿ ಪಡೆದಿದ್ದರು. ಅದೇ ತಂಬೂರಿ ವಾದನಕ್ಕೆ ಈ ವರ್ಷ ಉಮಾನಾಯ್ಕ ಪ್ರಶಸ್ತಿ ಪಡೆದಿದ್ದಾರೆ. ಉಮಾನಾಯ್ಕ ಅವರ ಪತ್ನಿ ಪೀರಿಬಾಯಿಗೂ ಈ ವರ್ಷ ಜಿಲ್ಲಾಡಳಿತದಿಂದ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ.

ಅಪರೂಪದ ಕಲಾ ನೈಪುಣ್ಯ ಹೊಂದಿದ ನಮ್ಮ ಕುಟುಂಬಕ್ಕೆ ಬಂಜಾರ ನಿಗಮ, ಜಿಲ್ಲಾಡಳಿತ, ಗ್ರಾಮ ಪಂಚಾಯತಿ ಮನೆ ಮಂಜೂರು ಮಾಡದೇ ತೀವ್ರ ನಿರ್ಲಕ್ಷ್ಯ ಮಾಡಿವೆ ಎಂದು ಉಮಾನಾಯ್ಕ ಅವರ ಮಗ ರುದ್ರಾನಾಯ್ಕ ನೊಂದುಕೊಂಡರು.

**ಮನೆ ಕಟ್ಟಿಸಿಕೊಡಿ ಸಾಕು !**

ಮಳೆ ಬಂದರೆ ಮನೆ ಸೋರುತ್ತೆ, ಚೆರಂಡಿ ನೀರೂ ನುಗ್ಗುತ್ತದೆ. ಸರ್ಕಾರ ಮನೆ ಮಂಜೂರು ಮಾಡಿಲ್ಲ, ಮಕ್ಕಳು ಓದಲಿಕ್ಕೂ, ನಮ್ಮ ದಾಖಲೆ ಇಡಲೂ ನಮ್ಮ ಮನೆಯಲ್ಲಿ ಜಾಗವಿಲ್ಲ.ಸರ್ಕಾರ, ದಾನಿಗಳು, ಸಂಘ, ನಿಗಮಗಳು ದಯವಿಟ್ಟು ಮನೆ ಕಟ್ಟಿಸಿಕೊಟ್ಟರೆ ಸಾಕು ಎಂದು ಉಮಾನಾಯ್ಕ ಅವಲತ್ತುಕೊಂಡರು.

## ಮಾಲೀಕನ ಮನೆಯಲ್ಲಿ 15 ಕೋಟಿ ಚಿನ್ನ, 40 ಲಕ್ಷ ನಗದು ಕದ್ದ ಸೆಕ್ಯೂರಿಟಿ ಗಾರ್ಡ್

ಬೆಂಗಳೂರು, ನ.9- ಸೆಕ್ಯೂರಿಟಿ ಗಾರ್ಡ್, ತನ್ನ ಮಾಲೀಕನ ಮನೆಯಲ್ಲಿದ್ದ 15 ಕೋಟಿ ರೂ. ಮೌಲ್ಯದ ಚಿನ್ನ ಹಾಗೂ 40 ಲಕ್ಷ ರೂ. ನಗದು ಕಳ್ಳತನ ಮಾಡಿ ಪರಾರಿಯಾಗಿರುವ ಘಟನೆ ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಚಿನ್ನದ ವ್ಯಾಪಾರಿ ಸುರೇಂದ್ರ ಕುಮಾರ್ ಜೈನ್ ಅವರ ಜ್ಯುವೆಲರಿ ಶಾಪ್ ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದ ನೇಪಾಳ ಮೂಲದ ನಮ್ರಾಜ್, ತನ್ನ ಮಾಲೀಕನ ಮನೆಯಲ್ಲಿದ್ದ ಬರೋಬ್ಬರಿ 15.15 ಕೋಟಿ ರೂ. ಮೌಲ್ಯದ 18.4 ಕೆ.ಜಿಯ ಚಿನ್ನಾಭರಣ ಮತ್ತು 40 ಲಕ್ಷ ರೂಪಾಯಿ ಕಳ್ಳತನ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ. ಚಿನ್ನದ ವ್ಯಾಪಾರಿ ಸುರೇಂದ್ರ ಕುಮಾರ್ ಅವರು ನವೆಂಬರ್ 7 ರಂದು ಊರಿನಿಂದ ವಾಪಸ್ಸಾದಾಗ ಈ ಕಳ್ಳತನ ಬೆಳಕಿಗೆ ಬಂದಿದೆ. ಈ ಸಂಬಂಧ ಅವರು ಪೊಲೀಸ್ ಠಾಣೆಗೆ ದೂರು ನೀಡಿದ್ದು, ನೇಪಾಳ ಮೂಲದ ನಮ್ರಾಜ್ ಕಳ್ಳತ ನ ಮಾಡಿದ್ದಾನೆಂದು ಆರೋಪಿಸಿದ್ದಾರೆ. ಸದ್ಯ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


## ಸಾರ್ವಜನಿಕ ಪ್ರಕಟಣೆ

ನಾನು ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸಹಿ ಮಾಡಿರುವ ನಾನು ಶ್ರೀ ಕೆ.ಪ್ರಭು ಬಿನ್ ಗಂಗಪ್ಪ, ಮನೆ ನಂಬರ್.170/3, ಬನಶಂಕರಿ ದೇವಸ್ಥಾನದ ಹತ್ತಿರ, ಹಳೇಬೆತೂರು ರೋಡ್, ದಾವಣಗೆರೆ ಆದ ನಾನು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸೊತ್ತನ್ನು ಸೊತ್ತಿನ ಮೂಲ ಮಾಲೀಕರಿಂದ ಖರೀದಿಸಲು ಇಚ್ಚಿಸಿದ್ದು, ಷೆಡ್ಯೂಲ್ ಸೊತ್ತಿನ ಮೂಲ ಕ್ರಯಪತ್ರ ಹಾಗೂ ಸ್ವತ್ತಿಗೆ ಸಂಬಂಧಪಟ್ಟ ಮೂಲ ದಾಖಲೆಗಳು ಗೈರುವಿಲೆ ಆಗಿದ್ದು, ಸದರಿ ಸೊತ್ತಿನ ದಾಖಲೆಗಳನ್ನು ದಾವಣಗೆರೆ ಹಿರಿಯ ಉಪ-ನೋಂದಣಾಧಿಕಾರಿಗಳವರ ಕಛೇರಿಯಿಂದ ದೃಢೀಕೃತ ಪ್ರತಿಯ ಆಧಾರದ ಮೇಲೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ, ಸಂಘ-ಸಂಸ್ಥೆ ಇತ್ಯಾದಿಯವರಿಗೆ ಆಗಲೀ ಕಾನೂನಿನಡಿಯಲ್ಲಿ ಮತ್ತಿತರೆ ಯಾವುದೇ ರೀತಿಯ ವಿಧದಲೂ, ಯಾವುದೇ ವಿಧವಾದ ಆಸಕ್ತಿ, ಹಕ್ಕು, ಅಡವು, ಜೀವನಾಂಶ, ವಿಲ್ ಯಾನೇ ಮರಣ ಶಾಸನ, ದಾನ ಪತ್ರ, ವಗೈರೇ ಯಾವುದೇ ಹೊಂದಿದ್ದಲ್ಲಿ ಅಂತವರೂ ಈ ಪ್ರಕಟಣೆಯ ತಾರೀಖಿನಿಂದ 10 (ಹತ್ತು) ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸದಲ್ಲಿ ಆಗಲೀ ಅಥವಾ ಈ ಕೆಳಗಿನ ಮೊಬೈಲ್ ನಂಬರ್‌ಗಳಿಗೆ ಸಂಪರ್ಕಿಸಬೇಕಾಗಿ ವಿನಂತಿ. ನಾನು ನೋಂದಣಿ ಮಾಡಿಸಿಕೊಂಡ ನಂತರ ಬರುವ ಯಾವುದೇ ರೀತಿಯಿಂದ ಹಕ್ಕುಬಾಧ್ಯತೆಗಳಿಗಾಗಲೀ, ಯಾವುದೇ ರೀತಿಯಿಂದ ಬರುವ ತಕರಾರುಗಳಿಗಾಗಲೀ ಯಾವುದೇ ರೀತಿಯಿಂದ ಬರುವ ಕಾನೂನು ತೊಡಕುಗಳಿಗಾಗಲೀ ಅದಕ್ಕೆ ಸಂಬಂಧಪಟ್ಟವರಾಗಲೀ, ವಾರಸುದಾರರಾಗಲೀ ಕಾನೂನು ರೀತಿಯಲ್ಲಿ ಹಕ್ಕು ಕಳೆದುಕೊಳ್ಳಿತ್ತೀರಿ ಎಂದು ಈ ಸಾರ್ವಜನಿಕ ಪ್ರಕಟಣೆಯ ಪತ್ರಿಕೆಯ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್** : ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ರೀ ಸರ್ವೆ ನಂಬರ್ 103/1, ಹಾಲಿ ದಾವಣಗೆರೆ ಸಿಟಿ, ಆಂಜನೇಯ ಬಡಾವಣೆ, 14ನೇ ಕ್ರಾಸ್‌ನಲ್ಲಿ ಬರುವ ಸೈಟ್ ನಂಬರ್.52, ಇದರ ಅಳತೆ : 35 x 50ಅಡಿವುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ : **ಪೂರ್ವಕ್ಕೆ** : ಸೈಟ್ ನಂಬರ್ 49, **ಪಶ್ಚಿಮಕ್ಕೆ** : ಸೈಟ್ ನಂಬರ್ 53, **ಉತ್ತರಕ್ಕೆ** : ಮೇನ್ ರೋಡ್, **ದಕ್ಷಿಣಕ್ಕೆ** : ಕನ್ಸರ್‌ವೆನ್ಸಿ.

ಸ್ಥಳ : ದಾವಣಗೆರೆ
ದಿನಾಂಕ : 07-11-2024

ತಮ್ಮ ವಿಶ್ವಾಸಿ, (ಕೆ.ಪ್ರಭು)
87222 09719, 8150031161

# ಸಂಸ್ಕಾರಯುತ ಶಿಕ್ಷಣ ನೀಡುವುದು ಮಠಗಳ ಆದ್ಯ ಕರ್ತವ್ಯ

## ತರಳಬಾಳು ನುಡಿ ಹಬ್ಬ 2024 - ಕವಿಗೋಷ್ಠಿಯಲ್ಲಿ ತರಳಬಾಳು ಜಗದ್ಗುರುಗಳು



ಸಿರಿಗೆರೆ, ನ. 9- ಸಮತಲದಲ್ಲಿ ಹರಿಯುವ ನದಿ ಗದ್ಯವಾದರೆ, ಬೆಟ್ಟದ ಮೇಲಿಂದ ಭೋರ್ಗರೆಯುತ್ತಾ ಧುಮ್ಮಿಕ್ಕುವ ಜಲಪಾತವೇ ಪದ್ಯ. ಸೀಮಿತವಾಗಿ ಸತ್ವಯುತವಾಗಿ ಹೇಳುವುದೇ ಪದ್ಯ. ನಾವು ಕವಿಗಳಿಂದ ಪ್ರಭಾವಿತರಾಗಿ ಕೆಲವು ಸ್ವರಚಿತ ಕವನಗಳನ್ನು ರಚಿಸಿದ್ದೇವೆ ಎಂದು ಸಿರಿಗೆರೆಯ ತರಳಬಾಳು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಮತ್ತು ಕನ್ನಡ ಸಾಹಿತ್ಯ ಪರಿಷತ್ (ಬೆಂಗಳೂರು) ಇವರ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಶನಿವಾರ ಜರುಗಿದ ತರಳಬಾಳು ನುಡಿಹಬ್ಬ 2024ರ ಎರಡನೇ ದಿನದ ಕವಿಗೋಷ್ಠಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ನಮ್ಮ ಮಠದಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಸ್ಕಾರಕ್ಕೂ, ನಗರಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಸ್ಕಾರಕ್ಕೂ ತುಂಬಾ ವ್ಯತ್ಯಾಸವಿದೆ. ಆದ್ದರಿಂದ ವಿದ್ಯಾರ್ಥಿಗಳಿಗೆ ಸಂಸ್ಕಾರಯುತ ಶಿಕ್ಷಣ ನೀಡಿ ಸಂಸ್ಕಾರಯುತರನ್ನಾಗಿ ಮಾಡಬೇಕಾಗಿರುವುದು ಮಠಗಳ ಆದ್ಯ ಕರ್ತವ್ಯವಾಗಿದೆ ಎಂದರು.

ತುಮಕೂರು ಹಿರೇಮಠದ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಿರಿ ಗರ ಬಡಿದವರನ್ನು ಸರಿದಾರಿಗೆ ತಂದು ನಿಲ್ಲಿಸಿದ ಮಠ ಸಿರಿಗೆರೆ ಮಠ. ಶ್ರೀಮಠವು ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ವೈಚಾರಿಕ ಸಾಕ್ಷಿ ಪ್ರಜ್ಞೆಯಿಂದ ಶತ ಶತಮಾನಗಳಿಂದ ತನ್ನದೇ ಆದ ಭೂಮಿಕೆಯಲ್ಲಿದೆ. ಸರ್ಕಾರದ ವತಿಯಿಂದ ನಡೆಯುವ ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತಿಗಳಾಗಿ ರುವ ನಾಡಿನ ಪ್ರಸಿದ್ಧ ಸ್ವಾಮೀಜಿಯವರಿಗೆ ವೇದಿಕೆ ನೀಡುವುದು ಸರ್ಕಾರದ ಕರ್ತವ್ಯವಾಗಲಿ.

ಸಂಸ್ಕಾರದ ಜೊತೆಗಿರುವ ಶಿಕ್ಷಣವೇ ಸಾರ್ಥಕ. ಶ್ರೀಮಠವು ಪರಂಪರೆಯಲ್ಲಿ ಶಿಕ್ಷಣ, ಸಂಸ್ಕಾರ, ಶಿಸ್ತು, ಸಮಯಕ್ಕೆ ಹೆಸರುವಾಸಿಯಾಗಿದೆ ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಕಾ.ವೆಂ.ಶ್ರೀನಿವಾಸಮೂರ್ತಿ ಮಾತನಾಡಿ, ಕನ್ನಡ ಹಾಗೂ ಖಾಸಗಿ ಶಾಲೆಗಳಲ್ಲಿ ಮಾತೃಭಾಷೆ ಶಿಕ್ಷಣ ಕಡ್ಡಾಯವಾಗಿ ಜಾರಿಯಾಗಬೇಕು. ಮಕ್ಕಳಿಗೆ ಮಾತೃ ಭಾಷೆಯ ಮಾಧ್ಯಮ ಶ್ರೇಷ್ಠ. ಇದುವೇ ಕರ್ನಾಟಕ ಏಕೀಕರಣದ ಆಶಯವಾಗಿದೆ. ಇಂದು ದೇಶಾದ್ಯಂತ ಕೇಂದ್ರ ಸರ್ಕಾರದ ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆಗಳು ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿವೆ. ರಾಜ್ಯ ಸರ್ಕಾರಗಳ ಮೇಲೆ ಹಿಂದಿ ಏರಿಕೆ ಇಂದು ಹೆಚ್ಚಾಗಿದ್ದು, ಬ್ಯಾಂಕಿಂಗ್, ರೈಲ್ವೆ ಮುಂತಾದ ಕೆಲಸಗಳನ್ನು ಉತ್ತರ ಭಾರತದವರೇ ಹೆಚ್ಚಾಗಿ ಪಡೆಯುತ್ತಿದ್ದಾರೆ. ನಮ್ಮ ಕರ್ನಾಟಕಕ್ಕೆ ತ್ರಿಭಾಷಾ ನೀತಿ ಬೇಡ. ದ್ವಿಭಾಷಾ ನೀತಿ ಬೇಕು. ಇಂತಹ ನಿರ್ಣಯಗಳನ್ನು ಸರ್ಕಾರ ಕೈಗೊಳ್ಳಬೇಕು. ಕರ್ನಾಟಕದ ಆತ್ಮ ಕನ್ನಡ ಆಗಿದೆ ಎಂದರು.

ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಮಾತನಾಡಿ, ಸಂವಿಧಾನ, ಸ್ವಾತಂತ್ರ್ಯ ಪ್ರಜಾಪ್ರಭುತ್ವದಿಂದ ಇಂದು ಮಹಿಳೆಯರಿಗೆ ಶಿಕ್ಷಣ ದೊರೆತಿದೆ. ಕವಿಗಳೆಂದರೆ ಸಂಪ್ರದಾಯವಾದಿ, ಜಾತಿವಾದಿ, ಕೋಮುವಾದಿ ಅಲ್ಲ. ಅವರುಗಳೊಬ್ಬ ಪ್ರಜಾಪ್ರಭುತ್ವದ ಸೌಹಾರ್ದ ಪರಂಪರೆಯ ವಕ್ತಾರನಾಗಿರುತ್ತಾನೆ. ಕೋಮುವಾದಿಗಳಿಗೆ ಕವಿಗಳನ್ನು ಕಂಡರೆ ಇಷ್ಟವಿಲ್ಲ. ಹಾಗಾಗಿ ಹಲವು ಕವಿಗಳ, ಪತ್ರಕರ್ತರ ಸಾವಾಗಿದೆ. ಕವಿಗಳ, ಜನ ಸಾಮಾನ್ಯರ ಬರವಣಿಗೆಗಳು ದೊಡ್ಡ ಶಕ್ತಿಯಾಗಿ ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಕಾಪಾಡುತ್ತಿವೆ. ಮಠದಲಿ ನಡೆಸುವ ಇಂತಹ ಕಾರ್ಯಕ್ರಮಗಳಿಗೆ ಸರ್ಕಾರದ ತೆರಿಗೆ ಹಣ ಲಭಿಸಲಿ ಎಂದು ಹೇಳಿದರು.

ಚಿತ್ರದುರ್ಗದ ಡಾ.ಟಿ.ಭವ್ಯರಾಣಿ, ಸುಜೀತ್ ಕುಲಕರ್ಣಿ ಹಾಗೂ ತಂಡದವರು ಹಿಂದೂಸ್ತಾನಿ ವಯೋಲಿನ್ ವಾದನ ನುಡಿಸಿ, ವಚನ ಗಾಯನ ಹಾಡಿದರು.

2024ರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಾಗೂ ಹಸೆ ಚಿತ್ರಕಲಾವಿದ ಚಂದ್ರಶೇಖರ ಸಿರಿವಂತೆ, ಸರೋಜ ಪಾಂಡೋಮಟ್ಟಿ, ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪ್ರಶಸ್ತಿ ಪುರಸ್ಕೃತರಾದ ಆರಿಫ್‌ರಜಾ, ಹಾವೇರಿ ಕಸಾಪ ಅಧ್ಯಕ್ಷ ಲಿಂಗಯ್ಯ ಬಿ.ಹಿರೇಮಠ, ಶ್ರೀಸಂಸ್ಥೆಯ ವಿಶೇಷಾಧಿಕಾರಿ ವೀರಣ್ಣ ಎಸ್. ಜತ್ತಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಕವಿಗೋಷ್ಠಿ** : ಜಗಳೂರಿನ ಎನ್.ಟಿ.ಎರ್ರಿಸ್ವಾಮಿ, ಬೆಂಗಳೂರು ಜಿ.ಎ. ಜಗದೀಶ್, ದಾವಣಗೆರೆಯ ಶ್ರೀಕೃಷ್ಣ ನಾಯಕ್, ನಾಗರಾಜ ಸಿರಿಗೆರೆ, ಪ್ರತಿಭಾ ಬಳ್ಳಿಗಾವಿ, ಎಚ್.ಶಿವಮೂರ್ತಿ, ಹಾನಗಲ್‌ನ ವಿಜಯಕಾಂತ ಪಾಟೀಲ್, ಚಿತ್ರದುರ್ಗದ ಡಾ.ಎಸ್.ಎನ್. ಹೇಮಂತರಾಜು, ಡಾ.ಬಿ. ಎಂ.ಗುರುನಾಥ್, ಎಂ.ತಿಪ್ಪೇಸ್ವಾಮಿ ಉಪ್ಪಾರಹಳ್ಳಿ, ರಾಣೇಬೆನ್ನೂರಿನ ಮಂಜಯ್ಯ ದೇವರಮನಿ, ಮೊಳಕಾಲ್ಮೂರಿನ ಜಬೀವುಲ್ಲಾ ಎಂ.ಅಸದ್, ಹೊಳಲ್ಕೆರೆಯ ಟಿ.ಪಿ. ಉಮೇಶ್, ಹಿರಿಯೂರಿನ ಎಂ.ಜಿ.ಆರ್ ದಾಮಿನಿ ಸ್ವರಚಿತ ಕವನ ವಾಚಿಸಿದರು.

## ಹರಿಹರ : ಅವಧಿ ಮೀರಿದ ಹಾಲು; ಪೋಷಕರ ಆತಂಕ



ಹರಿಹರ, ನ.9- ನಗರದ ಜಿ.ಬಿ.ಎಂ.ಎಸ್. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಅವಧಿ ಮುಗಿದಿ ರುವ ಪ್ಯಾಕೆಟ್ ಹಾಲನ್ನು ವಿತರಣೆ ಮಾಡುತ್ತಿದ್ದು, ಇದು ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಹುದು ಎಂದು ಶಾಲಾ ಪೋಷಕರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಶಾಲೆಯಲ್ಲಿ 80 ವಿದ್ಯಾರ್ಥಿಗಳಿದ್ದು ಪರೀಕ್ಷೆ ಸಮಯದಲ್ಲಿ 70 ರಿಂದ 75 ವಿದ್ಯಾರ್ಥಿಗಳು ಶಾಲೆಗೆ ಬಂದರೆ. ಇನ್ನು ಪ್ರತಿನಿತ್ಯ 60 ವಿದ್ಯಾರ್ಥಿಗಳು ಬರುತ್ತಾರೆ.

ಎಸ್ಸಿ, ಎಸ್ಟಿ ಜನಾಂಗದ ಮತ್ತು ಬಡವರ ಮಕ್ಕಳೇ ಇಲ್ಲಿ ಹೆಚ್ಚಿನದಾಗಿ ವಿದ್ಯಾಭ್ಯಾಸ ಮಾಡುತ್ತಾರೆ. ವಾರದಲ್ಲಿ ನಾಲ್ಕು ದಿನ ಅನ್ನ ಸಾಂಬಾರ್, ಬುಧವಾರ ಹಾಗೂ ಶನಿವಾರ ಉಪ್ಪಿಟ್ಟು, ಪಲಾವು ಅಥವಾ ಬಿಸಿ ಬೇಳೆಬಾತ್ ಜೊತೆಗೆ ಮೂರು ದಿನ ಹಾಲು, ಮೂರು ದಿನ ರಾಗಿ ಮಾಲ್ಟ್ ಮತ್ತು ಬಾಳೆ ಹಣ್ಣು ವಿತರಿಸಲಾಗುತ್ತದೆ ಎಂದು ಹೇಳಲಾಗುತ್ತಿದೆ.

ಇತ್ತೀಚೆಗೆ ಬಿ.ಇ.ಓ ಮತ್ತು ಅಕ್ಷರ ದಾಸೋಹ ಇಲಾಖೆಯ ಇಲಾಖೆಯ ಅಧಿಕಾರಿಗಳು ಈ ಶಾಲೆಗೆ ಭೇಟಿ ಕೊಟ್ಟು ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ವಿತರಣೆ ಮಾಡಬೇಕೆಂದು ಮುಖ್ಯ ಶಿಕ್ಷಕರಿಗೆ ಎಚ್ಚರಿಕೆ ನೀಡಿದ್ದರು.

ಆದರೆ ಇಲ್ಲಿನ ಮುಖ್ಯಶಿಕ್ಷಕ ಎಚ್ಚೆತ್ತುಕೊಳ್ಳದೇ ವಿದ್ಯಾರ್ಥಿಗಳಿಗೆ ಈಗ ಅವಧಿ ಮುಗಿದಿರುವ 50 ಪ್ಯಾಕೆಟ್ ಹಾಲು ಮತ್ತು 5 ಪ್ಯಾಕೆಟ್ ರಾಗಿ ಮಾಲ್ಟ್ ನೀಡಲು ಮುಂದಾಗಿದ್ದಾರೆ ಎಂದು ದೂರಲಾಗಿದೆ.

ಜಿಲ್ಲೆಯ ಅಕ್ಷರ ದಾಸೋಹ ಮತ್ತು ತಾಲ್ಲೂಕು ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಗಮನವನ್ನು ಹರಿಸಲು ಮುಂದಾಗುವಂತೆ ಶಾಲೆಯ ಪೋಷಕರು ಆಗ್ರಹಿಸಿದ್ದಾರೆ.

## 100ನೇ ಬಾರಿಗೆ ರಕ್ತದಾನ ಮಾಡಿದ ಅನಿಲ್ ಬಾರೆಂಗಳ್



ದಾವಣಗೆರೆ, ನ.9- ಇಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಖಜಾಂಚಿ ಹಾಗೂ ಲೈಫ್ ಲೈನ್ ಸ್ವಯಂ ಪ್ರೇರಿತ ರಕ್ತದಾನಿಗಳ ಸಮೂಹದ ಕಾರ್ಯದರ್ಶಿ ಅನಿಲ್ ಬಾರೆಂಗಳ್ ತಮ್ಮ ಜನ್ಮದಿನದ ಪ್ರಯುಕ್ತ 100ನೇ ಬಾರಿ ರಕ್ತದಾನ ಮಾಡಿದರು.

ಭಾರತೀಯ ರೆಡ್ ಕ್ರಾಸ್ ರಕ್ತ ಭಂಡಾರದಲ್ಲಿ ಸಂಸ್ಥೆಯ ಸಭಾಪತಿಗಳಾದ ಡಾ|| ಎ. ಎಮ್. ಶಿವಕುಮಾರ್ ಉಪಸ್ಥಿತಿಯಲ್ಲಿ ರಕ್ತ ಭಂಡಾರದ ವೈದ್ಯಾಧಿಕಾರಿ ಡಾ|| ಬಸವರಾಜ್, ಹಿರಿಯ ವೈದ್ಯರುಗಳಾದ ಡಾ|| ಸುರೇಶ್ ಬಾಬು ಪಿ. ಎಸ್., ಡಾ|| ಸುನಿಲ್ ಕುಮಾರ್, ಡಾ|| ನಿಕೇತನ್ , ಡಾ|| ಶಿಲ್ಪ ಶ್ರೀ, ಡಾ|| ಕಿರಣ್ ಹೆಗಡೆ ಹಿರಿಯ ವೈದ್ಯರುಗಳ ಸಮ್ಮುಖದಲ್ಲಿ ಹಾಗೂ ಮಾಜಿ ಕಾರ್ಯದರ್ಶಿ ಶ್ರೀ ಉಮೇಶ್ ಶೆಟ್ಟಿ, ಆನಂದ ಜ್ಯೋತಿ, ಶ್ರೀಕಾಂತ್ ಬಗರೆ, ರಾಜು ಭಂಡಾರಿ, ವಿಜಯಕುಮಾರ್, ಮಾಧವ ಪದಕಿ ಹೀಗೆ ಹಲವಾರು ರಕ್ತದಾನಿಗಳ ಸಮ್ಮುಖದಲ್ಲಿ ರಕ್ತದಾನ ಮಾಡಿದರು.

## ಜಿಎಸ್‌ಟಿ-ನೋಟು ಅಮಾನ್ಯೀಕರಣ ಬಡವರ ಕೊಲ್ಲುವ ಅಸ್ತ್ರಗಳಾಗಿವೆ : ರಾಗಾ




ಜೆಮ್‌ಶೆಡ್‌ಪುರ, ನ.9- ಜಿಎಸ್‌ಟಿ ನೀತಿ ಹಾಗೂ ನೋಟು ಅಮಾನ್ಯೀಕರಣ ನೀತಿಗಳು ದೇಶದಲ್ಲಿ ರೈತರು, ಕಾರ್ಮಿಕರು ಮತ್ತು ಬಡವರನ್ನು ಕೊಲ್ಲುವ ಅಸ್ತ್ರಗಳಾಗಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಜೆಮ್‌ಶೆಡ್‌ಪುರದಲ್ಲಿ ಶನಿವಾರ ಚುನಾವಣಾ ರ್‍ಯಾಲಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ದೇಶದಲ್ಲಿ ಪ್ರೀತಿಯಲ್ಲಿ ನಂಬಿಕೆಯುಳ್ಳ ಇಂಡಿಯಾ ಕೂಟ ಹಾಗೂ ದ್ವೇಷದಲ್ಲಿ ನಂಬಿಕೆಯುಳ್ಳ ಬಿಜೆಪಿ-ಆರ್‌ಎಸ್‌ಎಸ್ ಸಿದ್ಧಾಂತಗಳ ನಡುವೆ ಯುದ್ಧ ನಡೆಯುತ್ತಿದೆ. ಇದು ಹಿಂಸಾಚಾರ ಮತ್ತು ಏಕತೆಯ ನಡುವಿನ ಹೋರಾಟವೂ ಆಗಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ನಿರುದ್ಯೋಗ ಹೆಚ್ಚಾಗಲು ನರೇಂದ್ರ ಮೋದಿಯವರ ನೀತಿಗಳು ಕಾರಣವಾಗಿವೆ. ಬಿಜೆಪಿ-ಆರ್‌ಎಸ್‌ಎಸ್ ದೇಶವನ್ನು ಜಾತಿ, ಧರ್ಮ ಮತ್ತು ಭಾಷೆಯ ಆಧಾರದ ಮೇಲೆ ವಿಭಜಿಸಲು ರಾಜಕೀಯ ಮಾಡುತ್ತಿವೆ. ಆದರೆ ಕಾಂಗ್ರೆಸ್ ಭಾರತದ ಸಂವಿಧಾನವನ್ನು ರಕ್ಷಿಸಲು ಬಯಸುತ್ತದೆ ಎಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶದಲ್ಲಿ ಹಣ ಹೂಡಿಕೆ ಮಾಡುವ ಬಂಡವಾಳಶಾಹಿಗಳಿಗೆ ಹಣ ನೀಡುತ್ತಿದ್ದಾರೆ ಎಂದೂ ಅವರು ಆರೋಪಿಸಿದ್ದಾರೆ.

## ಕಾಂ. ಹೆಚ್. ಸುಗೀರಪ್ಪ ಆಯ್ಕೆ



ದಾವಣಗೆರೆ, ನ. 9 - ಅಖಿಲ ಭಾರತ ಕೆನರಾ ಬ್ಯಾಂಕ್ ನಿವೃತ್ತರ ಫೆಡರೇಷನ್‌ನ ಕೇಂದ್ರ ಸಮಿತಿ ಸದಸ್ಯರಾಗಿ ಕಾಂ. ಹೆಚ್. ಸುಗೀರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನವದೆಹಲಿಯಲ್ಲಿ ಈಚೆಗೆ ನಡೆದ ಫೆಡರೇಷನ್‌ನ 4ನೇ ತ್ರೈವಾರ್ಷಿಕ ಸಮ್ಮೇಳನದಲ್ಲಿ ಈ ಆಯ್ಕೆ ನಡೆದಿದೆ.

## ಕುರಿ-ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ನ.9- ಇಲ್ಲಿನ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶು ಸಂಗೋಪನಾ ಚಟುವಟಿಕೆಗಳ ತರಬೇತಿ ಆಯೋಜಿಸಲಾಗಿದೆ. ನಾಡಿದ್ದು ದಿನಾಂಕ 11 ಮತ್ತು 12ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಹಾಗೂ ಇದೇ ದಿನಾಂಕ 15 ಮತ್ತು 16ರಂದು ಕೋಳಿ ಸಾಕಾಣಿಕೆ ತರಬೇತಿ, ಇದೇ ದಿನಾಂಕ 29, 30ರಂದು ಆಧುನಿಕ ಹೈನುಗಾರಿಕೆ ತರಬೇತಿ ನಡೆಯಲಿದೆ. ಮಾಹಿತಿಗಾಗಿ 08192-233787 ಸಂಪರ್ಕಿಸಿ.

## ಸೃಜನಶೀಲರಾಗಿ, ಬ್ಲಾಕ್‌ಮೇಲ್ ಆಗಬೇಡಿ..

### ಹರಪನಹಳ್ಳಿ 'ಕಾನೂನು ಅರಿವು' ಕಾರ್ಯಕ್ರಮದಲ್ಲಿ ನ್ಯಾ.ಮನುಶರ್ಮ ಕರೆ



ಹರಪನಹಳ್ಳಿ, ನ. 9- ದೇಶ ಸುಸಜ್ಜಿತವಾಗಿ ಇರಬೇಕಾದರೆ ಯುವಕರ ಪಾತ್ರ ಬಹಳ ಮುಖ್ಯ. ನಾವು ಕಾನೂನು ಬಾಹಿರವಾಗಿ ವರ್ತಿಸಬಾರದು, ಗ್ರಾಮೀಣ ಪ್ರದೇಶಗಳಲ್ಲಿ ಬಾಲ್ಯ ವಿವಾಹ ಹೆಚ್ಚಾಗಿ ಕಂಡುಬರುತ್ತದೆ ಇಂತಹ ಘಟನೆಗಳನ್ನು ತಡೆಯುವುದು ಯುವ ಪೀಳಿಗೆಯ ಆದ್ಯ ಕರ್ತವ್ಯ ಎಂದು ಕಿರಿಯ ಸಿವಿಲ್ ನ್ಯಾಯಾಧೀಶರಾದ ಎಸ್. ಪಿ ಮನು ಶರ್ಮ ಹೇಳಿದರು.

ಪಟ್ಟಣದ ಎಸ್.ಎಸ್. ಹೆಚ್ ಜೈನ್ ಪದವಿ ಪೂರ್ವ ಕಾಲೇಜಿನಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಮತ್ತು ಜೈನ್ ಪದವಿ ಪೂರ್ವ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ 'ಕಾನೂನು ಅರಿವು' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು

ಜೀವನದಲ್ಲಿ ಸಂಭವಿಸುವ ಅಹಿತಕರ ಘಟನೆಗಳ ಬಗ್ಗೆ ನಿಮ್ಮ ಹತ್ತಿರದ ಸಂಬಂಧಿಕರಿಗೆ ಅಥವಾ ನಿಮ್ಮ ತಂದೆ-ತಾಯಿಗಳ ಜೊತೆಗೆ ಹಂಚಿಕೊಂಡಾಗ ಮಾತ್ರ ನಿಮ್ಮ ಸಮಸ್ಯೆಗಳನ್ನು ನೀವೇ ಬಗೆಹರಿಸಿಕೊಳ್ಳಲು ಸಾಧ್ಯವಾಗು ತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಯುವಕ, ಯುವತಿಯರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸೃಜನಶೀಲ ವಿದ್ಯಾರ್ಥಿಗಳಾಗಬೇಕೇ ಹೊರತು ಬ್ಲಾಕ್‌ಮೇಲ್ ವಿದ್ಯಾರ್ಥಿಗಳಾಗಿ ಸಮಾಜಕ್ಕೆ ಮಾರಕ ಆಗಬೇಡಿ. ಕೆಲವು ಕಿಡಿಗೇಡಿಗಳು ಸರ್ಕಾರಿ ನೌಕರಿ ಕೊಡಿಸುವುದಾಗಿ ನಿಮ್ಮನ್ನು ವಂಚಿಸುವವರಿರುತ್ತಾರೆ ಇಂತಹವರ ಬಗ್ಗೆ ಎಚ್ಚರ ವಹಿಸಿ ಎಂದರು.

ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್ ಮಾತನಾಡಿ, ವಿದ್ಯಾರ್ಥಿಗಳು ವಾಹನ ಚಲಾಯಿಸುವಾಗ ಕಾನೂನು ಬದ್ದವಾಗಿ ಪರವಾನಗಿ ಪಡೆದುಕೊಂಡು ಕಾನೂನಾತ್ಮಕವಾಗಿ ನಡೆದುಕೊಳ್ಳಬೇಕು ಎಂದರು.

ಪ್ಯಾನಲ್ ವಕೀಲ ಎಂ.ಮೃತ್ಯುಂಜಯ ಮಾತನಾಡಿ, ಉಚಿತ ಕಾನೂನು ಸೇವೆ ಪಡೆಯಲು ಆರ್ಥಿಕವಾಗಿ ಹಿಂದುಳಿದವರಾಗಿರಬೇಕು ಇಂತಹ ಕಾನೂನು ಅರಿವನ್ನು ಸದ್ಬಳಿಕೆ ಮಾಡಿಕೊಳ್ಳಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಬಿ. ಬಸವರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಸಿ. ಪೀರ್ ಅಹಮ್ಮದ್, ಕಾರ್ಯದರ್ಶಿ ಕೇಶವಮೂರ್ತಿ ಹೆಚ್.ಎಂ., ರಾಜ್ಯಶಾಸ್ತ್ರ ಉಪನ್ಯಾಸಕ ವಿಶ್ವನಾಥ, ಇತಿಹಾಸ ಉಪನ್ಯಾಸಕ ಲಿಂಗನಾಯ್ಕ, ವಕೀಲರಾದ ನಳಿನಾಕುಮಾರಿ, ಸಿ. ಹನುಮಂತಪ್ಪ, ಬಿ.ತಿಪ್ಪೇಸ್ವಾಮಿ, ಡಿ.ಹನುಮಂತಪ್ಪ, ತಾ. ಕಾನೂನು ಸೇವಾ ಸಮಿತಿಯ ಸಿಬ್ಬಂದಿ ಕೊಟ್ರೇಶ್, ಬಸವರಾಜ್ ಸೇರಿದಂತೆ ಇತರರು ಇದ್ದರು.

## ನಗರದಲ್ಲಿ ಇಂದು ಶ್ರೀ ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜರ ಜಯಂತಿ

ಶ್ರೀ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ವತಿಯಿಂದ ಶ್ರೀ ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಇಂದು ಬೆಳಗ್ಗೆ 10.30 ಗಂಟೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದ ಬಳಿಯ ಶ್ರೀ ಶಂಕರ ಮಠದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಾಜದ ಅಧ್ಯಕ್ಷ ಮಲ್ಲಾರಸಾ ಆರ್. ಕಾಟ್ವೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಸಂಗೀತಗಾರ ಬಾಲಚಂದ್ರ ನಾಕೋಡ್, ರಾಣೇಬೆನ್ನೂರು ನಗರ ಸಭೆಯ ತ್ರಿವೇಣಿ ಪವಾರ್ ಪಾಲ್ಗೊಳ್ಳಲಿದ್ದಾರೆ.

## 'ಮಮ್ಮಾ' ಪ್ರೇರಣೆ : ಸೃಷ್ಟಿ ಪರಿವರ್ತನೆ ಪಥದಲ್ಲಿ ಮುಂದಡಿಯಿಟ್ಟಿರುವ ಶ್ವೇತ ವಸ್ತ್ರಧಾರಿ ಮಹಿಳೆಯರು

### ಈಶ್ವರೀಯ ವಿಶ್ವವಿದ್ಯಾಲಯದಲ್ಲಿನ 'ವಿಶ್ವ ಶಕ್ತಿ ದಿನ' ಆಚರಣೆ ಕಾರ್ಯಕ್ರಮದಲ್ಲಿ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಶ್ಲಾಘನೆ



ದಾವಣಗೆರೆ, ನ. 9- ಅಂತರರಾಷ್ಟ್ರೀಯ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ವಿಶ್ವವಿದ್ಯಾಲಯದ ಪ್ರಥಮ ಆಡಳಿತಾಧಿಕಾರಿಣಿಯಾಗಿದ್ದ ಮಾತೇಶ್ವರಿ ಜಗದಂಬಾ ಸರಸ್ವತಿ ಅವರ ಸ್ಮೃತಿ ದಿನವನ್ನು 'ವಿಶ್ವ ಶಕ್ತಿ ದಿನ'ವನ್ನಾಗಿ ಜಗತ್ತಿನಾದ್ಯಂತ ಇರುವ ಎಲ್ಲಾ ಈಶ್ವರೀಯ ವಿಶ್ವವಿದ್ಯಾಲಯಗಳಲ್ಲಿ ಆಚರಿಸಲಾಯಿತು.

ಸ್ಥಳೀಯ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಬ್ರಹ್ಮಾಕುಮಾರೀಸ್ ಸಂಸ್ಥೆಯ ಶಿವಧ್ಯಾನ ಮಂದಿರದಲ್ಲೂ ಕಳೆದ ವಾರ 'ವಿಶ್ವ ಶಕ್ತಿ ದಿನ'ವನ್ನು ಆಚರಿಸುವುದರ ಮೂಲಕ, ಜಗದಂಬಾ ಸರಸ್ವತಿಯವರ ಅಧ್ಯಾತ್ಮಿಕ ಸೇವೆಯನ್ನು ಮೆಲುಕು ಹಾಕಲಾಯಿತು.

**ಸಂಕ್ಷಿಪ್ತ ಪರಿಚಯ** : ಅಮೃತ ಸರದಲ್ಲಿ ಬೆಳ್ಳಿ ಬಂಗಾರದ ವ್ಯಾಪಾರಿಯಾಗಿದ್ದ ಪೊಕರದಾಸ ಮತ್ತು ರೋಚಾ ದಂಪತಿಯ ಪುತ್ರಿಯಾಗಿ 1919ರಲ್ಲಿ ಜನಿಸಿದ ಜಗದಂಬಾ ಸರಸ್ವತಿ ಅವರ ಲೌಖಿಕ ಹೆಸರು ರಾಧಾ. ಲೌಖಿಕ ವಿದ್ಯೆಯ ಜೊತೆಗೆ ಹಾಡುಗಾರಿಕೆ, ನೃತ್ಯದಲ್ಲಿಯೂ ಪ್ರಥಮ ಸ್ಥಾನದಲ್ಲಿದ್ದರು. ಪ್ರತಿಭಾವಂತ ಹಾಗೂ ಚಮತ್ಕಾರಿ ಬುದ್ಧಿವುಳ್ಳವರಾಗಿದ್ದ ರಾಧ, ವೀಣಾ ವಾದನ-ಗಾಯನ ಕಲೆಯಲ್ಲೂ ನಿಪುಣರಾಗಿದ್ದರು. 1937ರಲ್ಲಿ ದಾದಾ ಲೇಖರಾಜ ಅವರ ಮೂಲಕ ನಿರಾಕಾರ ಶಿವ ಪರಮಾತ್ಮನು ಸ್ಥಾಪಿಸಿದ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿದ್ದ ಸತ್ಸಂಗಕ್ಕೆ ತನ್ನ ತಾಯಿಯ ಜೊತೆ ಪ್ರತಿದಿನವೂ ಹೋಗುತ್ತಿದ್ದರು. ಸತ್ಯ ಜ್ಞಾನವನ್ನು ಕೇಳಿದ ನಂತರ ತಮ್ಮ ತನು-ಮನ-ಧನದೊಂದಿಗೆ ಸರ್ವಸ್ವವನ್ನು ಪರಮಾತ್ಮನಿಗೆ ಅರ್ಪಣೆ ಮಾಡಿದರು. ಈಶ್ವರೀಯ ಜ್ಞಾನ-ಯೋಗ ಬಲದಿಂದ ದೈವೀ ಗುಣಗಳನ್ನು ಸಿಂಗರಿಸಿಕೊಂಡು ಮಹಾನ್ ಯೋಗಿಗಳಾದರು. ಅಂದಿನ ದಿನಗಳಲ್ಲಿದ್ದ 350ಕ್ಕೂ ಹೆಚ್ಚು ಯಜ್ಞವತ್ಸರನ್ನು ಸಾವಿರಾರು ಬ್ರಹ್ಮವತ್ಸರನ್ನಾಗಿ ಮಾಡುವುದರ ಮೂಲಕ ಮಮತೆಯ ತಾಯಿಯಾಗಿ ಪಾಲನೆ ಮಾಡಿದರು. ಕರ್ಮ ಯೋಗಿಯ ಜೀವನದಲ್ಲಿ ಎರಡು ನಿಯಮಗಳ ಪಾಲನೆಗೆ ವಿಶೇಷ ಗಮನ ಹರಿಸಿದ್ದರು. ಭಗವಂತನ ಶಿಕ್ಷಣವನ್ನು ತಮ್ಮ ಜೀವನದಲ್ಲಿ ಸಂಪೂರ್ಣ ಪಾಲಿಸುತ್ತಿದ್ದರು. ಅವರಲ್ಲಿದ್ದ ಗಂಭೀರತೆ ಮತ್ತು ಮಧುರತೆ ಹರ್ಷಿತ ಮುಖದಿಂದ ಮಾತೆಯ ಮಮತೆ ಅನುಭವವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಜನರಿಂದ 'ಮಮ್ಮಾ' ಎಂದು ಬಿರುದು ಪಡೆದರೆ, ಪರಮಪಿತ ಪರಮಾತ್ಮನು 'ಜಗನ್ಮಾತೆ ಜಗದಂಬಾ ಸರಸ್ವತಿ' ಎಂಬ ಬಿರುದು ನೀಡಿದ್ದರು.

**'ಮಮ್ಮಾ' ಆದರ್ಶಗಳು ಅಜರಾಮರ** : ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ತಮ್ಮ ಆಶೀರ್ವಚನದಲ್ಲಿ, ಮಮ್ಮಾ ಆದರ್ಶಗಳು ಅಜರಾಮರವಾಗಿವೆ ಎಂದು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಪರಮಪಿತ ಶಿವ ಪರಮಾತ್ಮ ಅರ್ಥಾತ್ ಈಶ್ವರೀಯ ನಿಯಮಗಳನ್ನು ಪಾಲನೆ ಮಾಡುವಲ್ಲಿ ಕಾಳಿ ಹಾಗೂ ಶೀತಲಾದೇವಿ ರೂಪ ತಾಳಿದ್ದ ಮಮ್ಮಾ, ಮಧುರತೆ, ಕೋಮಲತೆ, ಸ್ನೇಹ, ನಿರ್ಮಲತೆ, ಸರಳತೆ, ನಮ್ರತೆ, ಶಾಂತತೆ, ಪವಿತ್ರತೆ ಮುಂತಾದ ದೈವೀ ಗುಣಗಳನ್ನು ಸಿಂಗರಿಸಿಕೊಂಡಿದ್ದರು. ಒಟ್ಟಿನಲ್ಲಿ ಅವರ ಜೀವನವು ಅನೇಕರಿಗೆ ಪ್ರೇರಣದಾಯಕ ಎಂದರಲ್ಲದೇ, ಜಗದಂಬಾ ಸರಸ್ವತಿ ಮತ್ತೊಬ್ಬ ಅಕ್ಕಮಹಾದೇವಿ ಎಂದು ವರ್ಣಿಸಿದರು.

ಜಗದಂಬಾ ಸರಸ್ವತಿಯವರ ಜೀವನದಿಂದ ಪ್ರೇರಣೆ ಪಡೆದು, ಸೃಷ್ಟಿ ಪರಿವರ್ತನೆಯ ಪಥದಲ್ಲಿ ಮುಂದಡಿಯಿಟ್ಟಿರುವ ಸಾವಿರಾರು ಶ್ವೇತ ವಸ್ತ್ರಧಾರಿ ಮಹಿಳೆಯರು ನಿರಂತರವಾಗಿ ವೃದ್ಧಿ ಪಡೆದು ತಮ್ಮ ಗುರಿಯಡೆಗೆ ಸಾಗುತ್ತಿದ್ದಾರೆ. ವರ್ತಮಾನ ಸಮಯದಲ್ಲಿ ಲಕ್ಷಾಂತರ ಬ್ರಹ್ಮಾಕುಮಾರಿ ಸಹೋದರಿಯರು ಮೌಲ್ಯ ಆಧಾರಿತ ವಿಶ್ವ ಪುನರುತ್ಥಾನಕ್ಕಾಗಿ ಕಟಿಬದ್ಧರಾಗಿ ಸಮಾಜಕ್ಕೆ ಒಂದು ಹೊಸ ದೆಸೆಯನ್ನು ನೀಡುತ್ತಿದ್ದಾರೆ. ಅಧ್ಯಾತ್ಮಿಕ ಕ್ಷೇತ್ರದಲ್ಲಿ ನಾರಿಯರಿಗೆ ಸಿಗುತ್ತಿರುವ ಗೌರವವು ಮಾತೇಶ್ವರಿ ಜಗದಂಬಾರವರು ಅಜ್ಞಾನತೆಯ ವಿರುದ್ಧ ನಡೆಸಿದ ಹೋರಾಟದ ಫಲಶೃತಿ ಎಂದರೆ ಅತಿಶಯೋಕ್ತಿಯಾಗ ಲಾರದು ಎಂದು ಲೀಲಾಜಿ ತಿಳಿಸಿದರು.

ಜ್ಞಾನದೇವಿ ಮಾತೇಶ್ವರಿ ಜಗದಂಬಾರವರ ಸೇವೆಯನ್ನು ಪರಿಗಣಿಸಿ ಅವರಿಗೆ ಪಿತಾಶ್ರೀ ಬ್ರಹ್ಮಾ ಬಾಬಾರವರು ತಾವು ಸ್ಥಾಪಿಸಿದ್ದ ಬ್ರಹ್ಮಾಕುಮಾರೀಸ್ ಸಂಸ್ಥೆಯ ಜ್ಞಾನ ಯಜ್ಞದ ಮಹತ್ವ ಪೂರ್ಣ ಜವಾಬ್ದಾರಿ ನೀಡಿದ್ದರು. ಇದರಿಂದಾಗಿ ವಿಶ್ವಾದ್ಯಂತ ಇರುವ ಸುಮಾರು ಬ್ರಹ್ಮಾಕುಮಾರೀಸ್ ಸಂಸ್ಥೆಗಳು ಮಹಿಳೆಯರ ನೇತೃತ್ವದಲ್ಲೇ ನಡೆಯುತ್ತಿರುವುದು ಶ್ಲಾಘನೀಯ ಎಂದು ಲೀಲಾಜಿ ತಿಳಿಸಿದರು.

ಈಶ್ವರೀಯ ವಿಶ್ವವಿದ್ಯಾಲಯದ ನಿಟುವಳ್ಳಿ ಶಾಖೆ ಸಂಚಾಲಕರಾದ ಬ್ರಹ್ಮಾಕುಮಾರಿ ರಾಜೇಶ್ವರಿ, ವಿದ್ಯಾನಗರ ಶಾಖೆ ಸಂಚಾಲಕರಾದ ಬ್ರಹ್ಮಾಕುಮಾರಿ ಗೀತಾ ಅವರುಗಳು ಸೇರಿದಂತೆ, ಸಂಸ್ಥೆಯ ವಿವಿಧ ಶಾಖೆಗಳ ಸಂಚಾಲಕರು, ರಾಜಯೋಗ ಶಿಕ್ಷಕಿಯರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ನಗರದ ಕಲ್ಯಾಣ ಮಂಟಪದಲ್ಲಿ ಕಳ್ಳತನ : ಇಬ್ಬರ ಬಂಧನ

ದಾವಣಗೆರೆ, ನ.9- ಸ್ಥಳೀಯ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪದಲ್ಲಿ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಕಲ್ಯಾಣ ಮಂಟಪದಲ್ಲಿ ಮದುವೆಗೆಂದು ಬಂದಾಗ ಮೊದಲ ಮಹಡಿ ಕೊಠಡಿಯಲ್ಲಿ ಬ್ಯಾಗ್‌ನಲ್ಲಿದ್ದ ಒಡವೆಗಳು ಕಳ್ಳತನವಾದ ಬಗ್ಗೆ ಬಡಾವಣೆ ಪೊಲೀಸ್ ಠಾಣೆಯಲ್ಲಿ ಕೌಶಿಕ್ ಬಿ.ಆರ್. ದೂರು ಸಲ್ಲಿಸಿದ್ದರು.

ಆರೋಪಿತರ ಪತ್ತೆಗೆ ಕಾರ್ಯಾಚರಣೆ ಕೈಗೊಂಡ ಪೊಲೀಸರಿಗೆ ಪದೇ ಪದೇ ಬರೀ ಕಲ್ಯಾಣ ಮಂಟಪಗಳಲ್ಲೇ ಕಳ್ಳತನ ಮಾಡುತ್ತಿದ್ದ ಆರೋಪಿತರ ಬಗ್ಗೆ ಸುಳಿವು ದೊರೆತಿದ್ದು, ತಂಡವು ಕಾರ್ಯ ಪ್ರವೃತ್ತರಾಗಿ, ರಿಂಗ್ ರಸ್ತೆ ಶಾಂತಿನಗರ ವಾಸಿ ಎನ್ನಲಾದ ಮಸಾಲೆ ವ್ಯಾಪಾರಿಗಳಾದ ಕಿರಣ್ ನಾಯ್ಕ ಹಾಗೂ ವಿನೋದ್ ನಾಯ್ಕ್ ಎಂಬುವರನ್ನು ಬಂಧಿಸಿದ್ದಾರೆ.

ಕಳ್ಳತನ ಮಾಡಿದ್ದ 5.32 ಲಕ್ಷ ರೂ. ಮೌಲ್ಯದ ಆಭರಣಗಳು, 1.25 ಲಕ್ಷ ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ 70 ಸಾವಿರ ರೂ. ಮೌಲ್ಯದ ಸ್ಕೂಟರ್, 7 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿ ಕಿರಣ್ ನಾಯ್ಕ್ ಜಿಲ್ಲೆಯ ವಿದ್ಯಾನಗರ ಠಾಣೆಯ 5 ಪ್ರಕರಣಗಳು, ಬಡಾವಣೆ ಠಾಣೆಯ 4, ಗಾಂಧಿನಗರ ಠಾಣೆಯ 1, ಬಸವನಗರ ಠಾಣೆಯ 1 ಪ್ರಕರಣ ಹಾಗೂ ಹಾಲಿ ಕೆಟಿಜೆ ನಗರ ಠಾಣೆಯ ಒಂದು ಪ್ರಕರಣ ಸೇರಿದಂತೆ ಒಟ್ಟು 12 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ತಿಳಿದು ಬಂದಿರುತ್ತದೆ.

ಈ ಪ್ರಕರಣದ ಕಾರ್ಯಾಚರಣೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀಮತಿ ಎಂ.ಆರ್ ಚೌಬೆ, ಪಿಎಸ್‌ಐ ನಾಗರಾಜ್ ಬಿ.ಆರ್, ಎಎಸ್‌ಐ ತಿಪ್ಪೇಸ್ವಾಮಿ, ಸಿಬ್ಬಂದಿಗಳಾದ ಹರೀಶ್, ಬಸವರಾಜ, ಧ್ರುವ, ಬಸವರಾಜ. ಡಿ, ಶ್ರೀಮತಿ ಗೀತಾ ಹಾಗೂ ಜಿಲ್ಲಾ ಪೊಲೀಸ್ ಕಛೇರಿಯ ರಾಘವೇಂದ್ರ, ರಾಮಚಂದ್ರ ಜಾಧವ್, ಶಾಂತರಾಜ್ ಭಾಗಿಯಾಗಿದ್ದರು.

ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ
ಶಾಂತಲಾ ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas